ಕರ್ನಾಟಕ ಸರಕಾರವು ತುಳು ಭಾಷೆಯ ಮಹತ್ವದ ಮನವರಿಕೆಯಾಗಿ 1994ರಲ್ಲಿ ತುಳುವಿಗೆ ಪ್ರತ್ಯೇಕ ಅಕಾಡೆಮಿಯನ್ನು ನೀಡಿ ಸೂಕ್ತ ಮನ್ನಣೆ ನೀಡಿತು. ಕೇಂದ್ರ ಸರಕಾರದ ರಿಜಿಸ್ಟ್ರಾರ್ ಜನರಲ್ ಹಾಗೂ ಜನಗಣತಿ ಆಯುಕ್ತರು, ಇಲಾಖೆಯ ಅಸ್ತಿತ್ವಕ್ಕೆ ಬಂದಂದಿನಿಂದಲೂ ತುಳು ಒಂದು ಪರಿಪೂರ್ಣ, ಸ್ವಯಂಪೂರ್ಣ ಭಾಷೆ ಎಂಬುದನ್ನು ದಾಖಲಿಸುತ್ತ ಬಂದಿದ್ದಾರೆ. ಅಮೇರಿಕ, ಯುರೋಪ್ ಮುಂತಾದ ಪಾಶ್ಚಾತ್ಯ ವಿಶ್ವವಿದ್ಯಾನಿಲಯಗಳು ತುಳುವನ್ನು ಪ್ರಮುಖ ಭಾರತೀಯ ಭಾಷೆಗಳಲ್ಲೊಂದು ಎಂಬುದಾಗಿ ಮಾನ್ಯ ಮಾಡಿವೆ. ಭಾರತದ ಪ್ರಮುಖ 17 ಭಾಷೆಗಳಲ್ಲಿ ತುಳು ಒಂದು ಎಂಬುದಾಗಿ ಪಾಶ್ಚಾತ್ಯ ವಿದ್ವಾಂಸರು ದಾಖಲೆಗಳಲ್ಲಿ ಉಲ್ಲೇಖಿಸಿದ್ದಾರೆ. ತುಳುವಿನ ಜನಪದ ಮಹಾಕಾವ್ಯಗಳೂ, ಭೂತಾರಾಧನೆ, ಯಕ್ಷಗಾನದಂಥ ಜನಪದ, ಸಾಂಪ್ರದಾಯಿಕ ಕಲಾಪ್ರಕಾರಗಳೂ ಜರ್ಮನಿ, ಇಂಗ್ಲೆಂಡ್, ಅಮೆರಿಕ, ಇಟಲಿ, ಫಿನ್ಲೆಂಡಿನಂಥ ವಿದೇಶಗಳ ವಿದ್ವಾಂಸರ ಅಧ್ಯಯನಕ್ಕೆ ಆಕರ್ಷಿಸಲ್ಪಟ್ಟಿದೆ. ಕರ್ನಾಟಕ ಸಾಂಸ್ಕೃತಿಕ ಪರಂಪರೆಯ ಅಧ್ಯಯನಾಂಗಗಳಲ್ಲಿ ತುಳು ಅವಿಭಾಜ್ಯವೆನಿಸಿದೆ. ಸಾಹಿತ್ಯ ರಚನೆಯ ದಿಸೆಯಲ್ಲೂ ತುಳುವಿಗೆ ಕನಿಷ್ಠ ಆರು ಶತಮಾನಗಳ ಹಿನ್ನೆಲೆಯಿದೆ.

ತುಳು ಮಾತೃಭಾಷೆಯನ್ನಾಡುವವರು ತುಳುನಾಡಿನಲ್ಲೂ, ರಾಜ್ಯ ಹೊರ ರಾಜ್ಯ ಹಾಗೂ ವಿದೇಶಗಳಲ್ಲೂ ಹರಡಿಕೊಂಡಿದ್ದು ಸುಮಾರು 40 - 50 ಲಕ್ಷದಷ್ಟು ಇರಬಹುದೆಂದು ಅಂದಾಜಿಸಲಾಗಿದೆ. ಇಷ್ಟು ಸಂಪದ್ಭರಿತ ಜನಪದ ಹಾಗೂ ಶಿಷ್ಟ ಸಾಹಿತ್ಯವುಳ್ಳ, ಇಷ್ಟೊಂದು ಅಪಾರ ಜನಸಮುದಾಯದ ಮಾತೃಭಾಷೆಯಾಗಿರುವ ತುಳುವನ್ನು ರಾಷ್ಟ್ರ ಸಂವಿಧಾನದ ಅಧಿಕೃತ ಭಾಷೆ ಎಂಬುದಾಗಿ ದಾಖಲಿಸಲು ಕೇಂದ್ರ ಸರಕಾರ ಈವರೆಗೆ ಕ್ರಮ ಕೈಗೊಂಡಿಲ್ಲ.

ತುಳುಭಾಷೆಗೆ ಸಂವಿಧಾನದ ಮಾನ್ಯತೆ ನೀಡಬೇಕೆಂದು ಕಳೆದ ಅನೇಕ ವರ್ಷಗಳಿಂದ ತುಳುವರು, ಅಖಿಲ ಭಾರತ ತುಳು ಒಕ್ಕೂಟವೂ ಸೇರಿದಂತೆ ವಿವಿಧ ತುಳು ಸಂಘಟನೆಗಳ ಒಕ್ಕೊರಲ ಬೇಡಿಕೆಯನ್ನು ಮುಂದಿಟ್ಟುಕೊಂಡು, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಅವಶ್ಯ ದಾಖಲೆ ವಿವರಗಳೊಂದಿಗೆ, ಈ ಹಿಂದೆಯೇ ಕರ್ನಾಟಕ ಸರಕಾರಕ್ಕೆ ಮನವಿ ಸಲ್ಲಿಸಿತ್ತು. ಮಾನ್ಯ ಕರ್ನಾಟಕ ಸರಕಾರದ ಮುಖ್ಯಮಂತ್ರಿಗಳು ಮನ್ನಣೆಗೆ ಶಿಫಾರಸು ಮಾಡಿ ಕೇಂದ್ರ ಸರಕಾರಕ್ಕೆ ಕಳುಹಿಸಿಕೊಟ್ಟಿದ್ದರು. ಕೇಂದ್ರ ಸರಕಾರವು ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವ ಮಾಹಿತಿಗಳಿಲ್ಲ. ಸುಮಾರು ಹತ್ತು ವರ್ಷಗಳ ಹಿಂದೆ ನೇಪಾಳಿ, ಮಣಿಪುರಿ ಮತ್ತು ನಮ್ಮದೇ ಸೋದರ ಭಾಷೆ ಕೊಂಕಣಿ ಭಾಷಿಗರ ಕೇಳಿಕೆಗಳನ್ನು

ಮನ್ನಿಸಿದ್ದಲ್ಲದೆ ಅನಂತರದ ವರ್ಷಗಳಲ್ಲಿ ಲಡಾಖಿ, ಡೋಗ್ರಿ, ಭೋಜ್‌ಪುರಿ, ಮೈಥಿಲಿ, ಸಂತಾಲಿ ಮುಂತಾದ ಭಾಷೆಗಳನ್ನು ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಸೇರಿಸುವ ಬಗ್ಗೆ ಉನ್ನತ ಮಟ್ಟದ ಸಮಿತಿ ರಚಿಸಿ ವರದಿ ಸಿದ್ಧಪಡಿಸಲಾಗುತ್ತಿದೆ. ಆದರೆ ತುಳುವಿನ ಪ್ರಸ್ತಾಪವೆಲ್ಲೂ ಬಂದಂತೆ ತೋರುತ್ತಿಲ್ಲ.

ಈ ನಿಟ್ಟಿನಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಇತ್ತೀಚೆಗೆ ವಿವಿಧ ತುಳು ಸಂಘಟನೆಗಳ, ಗಣ್ಯರ ಸಭೆ ಕರೆದು ಚರ್ಚಿಸಿ, ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ, ರಾಜ್ಯ ಕೇಂದ್ರದ ಸಚಿವರುಗಳು, ಶಾಸಕರಲ್ಲಿ ವಿಷಯ ಪ್ರಸ್ತಾಪನೆ ಮಾಡಿ, ಕೇಂದ್ರ ಸರಕಾರಕ್ಕೆ ಸೂಕ್ತ ಮನವಿ ಸಿದ್ಧಪಡಿಸಿತು. ಅಕಾಡೆಮಿಯ ಅಭಿಪ್ರಾಯದಂತೆ ವಿವಿಧ ತುಳು ಸಂಘಟನೆಗಳೂ ತುಳುವಿನ ಮಾನ್ಯತೆಗಾಗಿ ಕೇಂದ್ರವನ್ನು ಆಗ್ರಹಿಸುತ್ತಲಿದೆ.

ಕೃಪೆ : ಜನವಾಹಿನಿ 21-02-2003

೫. ದೆಹಲಿಯಲ್ಲಿ ತುಳು ಜಾಗೃತಿ ಸಮಾವೇಶ

ಜನವಾಹಿನಿ ವರದಿ

ತುಳು ಭಾಷೆಯನ್ನು ಭಾರತ ಸಂವಿಧಾನದ 8ನೇ ಪರಿಚ್ಛೇದದಲ್ಲಿ ಸೇರಿಸುವ ಸಲುವಾಗಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಹಾಗೂ ದೆಹಲಿಯ ತುಳು ಡೆವಲಪ್‌ಮೆಂಟ್ ಫೋರಂ ಸಂಯುಕ್ತ ಆಶ್ರಯದಲ್ಲಿ ಫೆ. 16ರಂದು ದೆಹಲಿಯ ಕನ್ನಡ ವಿದ್ಯಾಸಂಸ್ಥೆಯಲ್ಲಿ ತುಳು ಜಾಗೃತಿ ಸಮಾವೇಶ 'ದಿಲ್ಲಿಡ್ ತುಳು ಬೊಲ್ಪು' ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಎಂದು ತುಳು ಅಕಾಡೆಮಿ ಅಧ್ಯಕ್ಷ ಡಾ. ವಾಮನ ನಂದಾವರ ತಿಳಿಸಿದರು.

ತುಳು ಭಾಷೆಗೆ ಸಾಂವಿಧಾನಿಕ ಮಾನ್ಯತೆ ಒದಗಿಸಿಕೊಡಲು ಒತ್ತಾಯಿಸುವ ಉದ್ದೇಶವನ್ನು ಅನೇಕ ಸಂಘ ಸಂಸ್ಥೆಗಳು ಸ್ವಾಗತಿಸಿ ಬೆಂಬಲಿಸಿದ ನೆಲೆಯಲ್ಲಿ ಈ ಸಮಾವೇಶವನ್ನು ನಡೆಸಲಾಗುತ್ತಿದೆ. ಸಮಾವೇಶವನ್ನು ದೇಶದ ರಕ್ಷಣಾ ಸಚಿವ ಜಾರ್ಜ್ ಫೆರ್ನಾಂಡಿಸ್ ಉದ್ಘಾಟಿಸಲಿದ್ದು ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಸಂಸದರಾದ ಮಾರ್ಗರೆಟ್ ಆಳ್ವ, ವಿ. ಧನಂಜಯ ಕುಮಾರ್, ರಾಜ್ಯಸಭಾ ಸದಸ್ಯ ಆಸ್ಕರ್ ಫೆರ್ನಾಂಡಿಸ್ ಹಾಗೂ ರಾಜ್ಯ ಸಾರಿಗೆ ಸಚಿವ ಬಿ. ರಮಾನಾಥ ರೈ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಈ ಸಂದರ್ಭದಲ್ಲಿ ಅಕಾಡೆಮಿ ಮರುಪ್ರಕಟಣೆಯಾಗಿ ಪ್ರಕಟಿಸುವ ತುಳು ಕೈಪಿಡಿ ಮತ್ತು ತುಳು ಸಂಚಿ ಕೃತಿಗಳನ್ನು ಹಾಗೂ ಅಕಾಡೆಮಿ ತ್ರೈಮಾಸಿಕವಾಗಿ ಪ್ರಕಟಿಸುವ ಮದಿಪು 27ನೇ ಸಂಚಿಕೆಯನ್ನು, ತುಳು ದರ್ಶನ ಕನ್ನಡ ವಾರ್ತಾ ಪತ್ರಿಕೆಯನ್ನು ಬಿಡುಗಡೆ ಮಾಡಲಾಗುವುದು ಎಂದು ಅವರು ಹೇಳಿದರು.

ಈ ಸಮಾವೇಶದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಏಳು ಜನ ಗಣ್ಯರಾದ ಎಂ.ಕೆ. ಧರ್ಮರಾಜ (ಪತ್ರಿಕೋದ್ಯಮ), ಕೆ. ರಾಮ (ಸಮಾಜ ಸೇವೆ), ಕೆ.ಪಿ. ರಾವ್ (ತುಳು ಸಂಶೋಧನೆ), ಜಯರಾಂ ಬನಾನ್ (ಉದ್ದಿಮೆ), ಅರುವ ಕೊರಗಪ್ಪ ಶೆಟ್ಟಿ (ಯಕ್ಷಗಾನ), ದಾಸಪ್ಪ ರೈ (ಯಕ್ಷಗಾನ), ಸದಾನಂದ ಸುವರ್ಣ (ರಂಗಭೂಮಿ) ಇವರನ್ನು ಅಕಾಡೆಮಿ ಹಾಗೂ ತುಳು ಅಭಿವೃದ್ಧಿ ಸಂಸ್ಥೆಯಿಂದ ಸನ್ಮಾನಿಸಲಾಗುವುದು ಎಂದು ತಿಳಿಸಿದರು.

ಅಂದು ಮಧ್ಯಾಹ್ನ ತುಳು ಸಂವಾದ ಕಾರ್ಯಕ್ರಮದಲ್ಲಿ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್, ದಿನೇಶ್ ಅಮೀನ್ ಮಟ್ಟು, ಸದಾನಂದ ಸುವರ್ಣ, ಅಡ್ಯಾರು ಮಹಾಬಲ ಶೆಟ್ಟಿ, ಸುಂದರ ಕೇನಾಜೆ, ಮುದ್ದು ಮೂಡುಬೆಳ್ಳೆ, ಗಾಯತ್ರಿ ನಾವಡ, ಭಾಸ್ಕರ ರೈ ಕುಕ್ಕುವಳ್ಳಿ, ಡಾ. ಯು.ಪಿ. ಶಿವಾನಂದ, ಜಾನಕಿ ಎಂ., ವಿಜಯಕುಮಾರ್ ಭಂಡಾರಿ, ಅಡ್ಡೂರು ಉಮೇಶ್ ನಾಯ್ಕ್ ಭಾಗವಹಿಸಲಿದ್ದಾರೆ. ಸಂಜೆ ನಡೆಯಲಿರುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿಜಯಕುಮಾರ್ ಕೊಡಿಯಾಲ್‌ಬೈಲ್ ಬರೆದಿರುವ 'ವೀರಪ್ಪನ್ ಬಂಧನ' ಎಂಬ ತುಳು ಕಿರುನಾಟಕವನ್ನು ವಿ.ಜಿ. ಪಾಲ್ ನಿರ್ದೇಶನದಲ್ಲಿ ಅಕಾಡೆಮಿಯ ಸದಸ್ಯರು ನಡೆಸಿಕೊಡಲಿದ್ದಾರೆ. ಬಳಿಕ ಅಖಿಲ ಭಾರತ ತುಳು ಒಕ್ಕೂಟ ಮಂಗಳೂರು

ಇದರ ಪ್ರಾಯೋಜಕತ್ವದಲ್ಲಿ ಕರ್ನಾಟಕ ಯಕ್ಷಭಾರತಿ ಬೆಟ್ಟಂಪಾಡಿ ಪುತ್ತೂರು ಇವರು 'ಕೋಟಿ ಚೆನ್ನಯ' ತುಳು ಯಕ್ಷಗಾನವನ್ನು ನಡೆಸಿಕೊಡಲಿರುವರು. ಈ ಯಕ್ಷಗಾನ ಕಾರ್ಯಕ್ರಮದಲ್ಲಿ ಅರುವ ಕೊರಗಪ್ಪ ಶೆಟ್ಟಿ, ಭಾಸ್ಕರ ರೈ ಕುಕ್ಕುವಳ್ಳಿ, ಜಯಂತ್‌ಕುಮಾರ್ ಜೆಪ್ಪು, ನಾಗಪ್ಪ, ಆರ್.ಕೆ. ಉಳ್ಳಾಲ್, ದಯಾನಂದ ಶೆಟ್ಟಿ ಜೆಪ್ಪು, ಹರಿಶ್ಚಂದ್ರ ನಾಯ್ಕ್, ಕೆ.ಎಚ್. ದಾಸಪ್ಪ ರೈ, ದಿವಾಕರ ಆಚಾರ್ಯ ಪೊಳಲಿ, ಶರತ್‌ಕುಮಾರ್ ಕದ್ರಿ, ಸಂಜಯ್‌ಕುಮಾರ್ ಶೆಟ್ಟಿ, ದಿನಕರ್ ಎಸ್. ಪಚ್ಚನಾಡಿ, ದೀಪಕ್ ಕುಮಾರ್ ಪಾಲ್ಗೊಳ್ಳಲಿರುವರು. ತುಳು ಅಕಾಡೆಮಿಯ ಮಂಗಳೂರು ವತಿಯಿಂದ 35 ಮಂದಿಯ ತಂಡವೊಂದು ಭಾಗವಹಿಸಲಿದೆ. ಈ ಸಮಾವೇಶದಲ್ಲಿ ಒಟ್ಟು ಸುಮಾರು 1000 ಮಂದಿ ಭಾಗವಹಿಸುವ ನಿರೀಕ್ಷೆ ಇದೆ ಎಂದು ಅವರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ತುಳು ಅಕಾಡೆಮಿಯ ಸದಸ್ಯರಾದ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್, ವಿ.ಜಿ. ಪಾಲ್, ಮುದ್ದು ಮೂಡುಬೆಳ್ಳೆ, ದಾಮೋದರ ನಿಸರ್ಗ, ಅಕಾಡೆಮಿ ರಿಜಿಸ್ಟ್ರಾರ್ ಶಿವರುದ್ರಪ್ಪ ಉಪಸ್ಥಿತರಿದ್ದರು.

ಕೃಪೆ : ಜನವಾಹಿನಿ 15-2-03

೬. ತುಳು ಭಾಷೆ ಕಡೆಗೂ ಸ್ವಲ್ಪ ನೋಡಿ

ಕುದ್ಕಾಡಿ ವಿಶ್ವನಾಥ ರೈ

ಭಾರತದ ಭಾಷೆಗಳಲ್ಲಿ ತುಳು ಭಾಷೆಯು ಅಭಿವೃದ್ಧಿಗೊಂಡ ಒಂದು ಭಾಷೆಯಾಗಿಯೂ ಅವಗಣನೆಗೊಂಡಿದೆ ಎಂದು ಭಾಷಾವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಸೆಪ್ಟೆಂಬರ್ 12, 2004ರ ವಿಜಯ ಕರ್ನಾಟಕದಲ್ಲಿ 'ಯಾವುದು ಶಾಸ್ತ್ರೀಯ ಭಾಷೆ' ಎಂಬ ವಿಚಾರವಾಗಿ ವಿದ್ವಾಂಸರು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ.

ಡಾ. ಎಂ. ಚಿದಾನಂದ ಮೂರ್ತಿಗಳು ಮೂಲ ದ್ರಾವಿಡದ ಕವಲುಗಳಲ್ಲಿ ತುಳು ಭಾಷೆಯ ಮುಖ್ಯ ಕವಲು ಎಂಬುದನ್ನು ಚಿತ್ರದಲ್ಲಿ ತೋರಿಸಿದ್ದಾರೆ.

1956ರಲ್ಲಿ ಭಾಷಾವಾರು ಪ್ರಾಂತ ರಚನೆಯಾದ ಬಳಿಕ ಮುದ್ರಿತವಾದ, ಭಾರತ ಸರಕಾರದ ಕಾಪಿರೈಟ್ ಹೊಂದಿರುವ ಬ್ರಿಜು ಭಾಸಿ ಶಾಲಾ ಅಟ್ಲಾಸ್‌ಗಳಲ್ಲಿ 'ಭಾರತದ ಭಾಷೆಗಳು' ಎಂದಿದೆ. ಇದು ಕನ್ನಡ ಅಟ್ಲಾಸಿನ 36ನೇ ಪುಟದಲ್ಲಿದೆ. ಇಂಗ್ಲಿಷ್ ಅಟ್ಲಾಸಿನ 48ನೇ ಪುಟದಲ್ಲಿದೆ.

ಇದೇ ಚಿತ್ರವನ್ನು ಅಖಿಲ ಭಾರತದ ತುಳು ಒಕ್ಕೂಟದ 'ಉರಲ್' ಪತ್ರಿಕೆ, ಬಂಟರ ಯಾನೆ ನಾಡವರ ಸಂಘದ 'ಸಂಪರ್ಕ' ಪತ್ರಿಕೆ, 'ಜೋಕುಲೆ ಸಂಚಿ' ಎಂಬುದಾಗಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪ್ರಕಟಿಸಿದ ತುಳು, ಕನ್ನಡ, ಇಂಗ್ಲಿಷ್ ಭಾಷೆಯ ಮೂಲ ಪಾಠ ಪಠ್ಯಪುಸ್ತಕದ 'ಕವರ್' ಪುಟದಲ್ಲಿ ಕೊಡಲಾಗಿದೆ.

ಕ್ರಿಸ್ತ ಪೂರ್ವದ ಗ್ರೀಕ್ ಪ್ರಹಸನವೊಂದು ಪೆಪೀರಸ್ ಮರದ ಹಾಳೆಯಲ್ಲಿ ದೊರೆತುದರಲ್ಲಿ 36 ಸಾಲುಗಳು, ಕನ್ನಡ ಭಾಷೆಯವುಗಳಾಗಿರಬೇಕೆಂದು ದಿ. ಗೋವಿಂದ ಪೈಗಳು ಅಭಿಪ್ರಾಯಪಟ್ಟಿದ್ದಾರೆ. ಈ ಪ್ರಹಸನದ ಕತೆ ನಡೆದಿರುವುದು ಮಂಗಳೂರು ಮಲ್ಪೆ ಪ್ರದೇಶದಲ್ಲಿ. ಗೋವಿಂದ ಪೈಗಳ ಅಭಿಪ್ರಾಯವನ್ನು ಮರು ಪರಿಶೀಲನೆ ಮಾಡಿದ, ತುಳು ಮಾತೃಭಾಷೆಯ ಭಾಷಾ ವಿದ್ವಾಂಸ ಸಂಶೋಧಕರಾದ ಪಿ.ಎಸ್. ರೈಗಳು ಗ್ರೀಕ್ ಪೆಪಿರಸ್‌ನಲ್ಲಿ ದೊರೆತ ಮೂವತ್ತಾರು ಸಾಲುಗಳು ತುಳು ಭಾಷೆಯವುಗಳೆಂಬುದಾಗಿ, ಜಾಗತಿಕ ವಿದ್ವಾಂಸರ ಗೋಷ್ಠಿಗಳಲ್ಲಿ ಪ್ರಬಂಧ ಮಂಡಿಸಿ, ವಿದ್ವತ್ ಜನರಿಂದ ಸದಭಿಪ್ರಾಯ ಪಡೆದಿರುತ್ತಾರೆ ಎಂದು ತಿಳಿದುಬರುತ್ತದೆ.

ತುಳು, ಕನ್ನಡ, ಇಂಗ್ಲಿಷ್ ನಿಘಂಟಿನ ಆರು ಸಂಪುಟಗಳ ತಯಾರಿಯಲ್ಲಿ ಕ್ಷೇತ್ರಕಾರ್ಯ ಮಾಡಿದ ನಾವುಗಳೂ ರೈಗಳ ಅಭಿಪ್ರಾಯದಲ್ಲಿ ಸಹಮತ ಉಳ್ಳವರಾಗಿದ್ದೇವೆ. ಸುಮಾರು 70 ಲಕ್ಷ ಜನರು ಮಾತನಾಡುವ ತುಳು ಭಾಷೆಯಲ್ಲಿ ಪುರಾತನ ಕಾವ್ಯಗಳು, ಆಧುನಿಕ ಮಹಾಕಾವ್ಯಗಳು, ಜಾನಪದ ಮಹಾಕಾವ್ಯಗಳನ್ನೊಳಗೊಂಡ ಸಂಶೋಧನಾ ಗ್ರಂಥಗಳು, ಯಕ್ಷಗಾನ ಪ್ರಸಂಗಗಳು, ನಾಟಕ, ಕಾವ್ಯ, ಪ್ರವಾಸ ಕಥನ, ಕಾದಂಬರಿ, ನೃತ್ಯರೂಪಕ, ಗೀತಾ ನಾಟಕ, ವ್ಯಾಕರಣ, ನಿಘಂಟುಗಳು ಇನ್ನಿತರ ವಿದ್ವತ್ ಗ್ರಂಥಗಳು ಸಾಕಷ್ಟು ಸಂಖ್ಯೆಯಲ್ಲಿ ಉತ್ತಮ ಗುಣಮಟ್ಟದವುಗಳು ಬಂದಿರುತ್ತವೆ.

ತುಳು ಸಾಹಿತ್ಯ ಅಕಾಡೆಮಿ ಮಕ್ಕಳಿಗಾಗಿ, ನವಸಾಕ್ಷರರಿಗಾಗಿಯಲ್ಲದೆ ಸಂಶೋಧಕ ಗ್ರಂಥಗಳನ್ನು ಪ್ರಕಟಿಸುತ್ತಿದೆ. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ, ರಾಗೋಪೈ ಸಂಶೋಧನಾ

ಕೇಂದ್ರದಲ್ಲಿ, ಧರ್ಮಸ್ಥಳ, ಉಡುಪಿ, ಸುಬ್ರಹ್ಮಣ್ಯ ಮೊದಲಾದ ಧಾರ್ಮಿಕ ಕೇಂದ್ರಗಳಲ್ಲೂ ತುಳುವಿನ ಓಲೆಗರಿ ಗ್ರಂಥಗಳು, ಶಾಸನಗಳು, ಚಾರಿತ್ರಿಕ ದಾಖಲೆಗಳು ತುಳು ಭಾಷೆಯ ಕುರಿತು ಸಮೃದ್ಧವಾಗಿವೆ. ತುಳುನಾಡಿನ ಯಕ್ಷಗಾನ ಮಹಾನ್ ಕಲೆ ತುಳು ಭಾಷೆಯಲ್ಲಿ ಮಾತ್ರವಲ್ಲ, ಕನ್ನಡ, ಸಂಸ್ಕೃತ, ಹಿಂದಿ, ಮಲೆಯಾಳಂ, ಕೊಂಕಣಿ ಮೊದಲಾದ ಭಾಷೆಗಳಲ್ಲಿಯೂ ಪ್ರಯೋಗಗೊಳ್ಳುತ್ತಿದೆ. ರಂಗಭೂಮಿ, ಆಕಾಶವಾಣಿ, ದೂರದರ್ಶನವಲ್ಲದೆ 33 ತುಳು ಚಲನಚಿತ್ರಗಳೂ ತುಳು ಭಾಷೆಯಲ್ಲಿ ಬಂದಿದೆ. 'ಕೊಡು - ಕೊಳ್ಳುವುದು ನಮ್ಮ ರಾಷ್ಟ್ರ ಜೀವನದ ಮುಖ್ಯ ನಂಟು' ಎಂದು ತುಳುನಾಡ ಸಂಸ್ಕೃತಿ ತೋರಿಸಿಕೊಟ್ಟಿದೆ. ಕಾಸರಗೋಡು, ಉಡುಪಿ, ಮಂಗಳೂರು, ಪುತ್ತೂರು, ಚಿಕ್ಕಮಗಳೂರಿನ ಭಾಗದ ನಮ್ಮ ರಾಜಕೀಯ ಪ್ರತಿನಿಧಿಗಳು ತುಳುನಾಡು ಬೇಕೆಂದು ಕೇಳದಿರುವುದು ಒಂದು ಮಾದರಿ ಎಂದು ಹೇಳಬಹುದು.

ಇಲ್ಲ ಹಾಗೆ ಹೇಳುವಂತಿಲ್ಲ. ಬದಲಾಗುತ್ತಿರುವ ಈಗಿನ ರಾಜಕೀಯ ಬಿಸಿ ಆರುವ ಮೊದಲೇ ತುಳುನಾಡಿನ ಪ್ರತಿನಿಧಿಗಳು ಒಟ್ಟಾಗಿ ತುಳುನಾಡನ್ನು ಕೇಳುವ ಧೈರ್ಯ ಮಾಡಬೇಕು. ಹಾಗೆ ಮಾಡಿದರೆ ಅವರಿಗೂ ತಮ್ಮ ಭಾಷೆ, ಸಂಸ್ಕೃತಿಯ ಒಲವಿದೆ ಎಂದು ತೋರಿಸುವ ಧೈರ್ಯವೂ ಇದೆ ಎಂದು ತಿಳಿಯಬಹುದು. ಮಾತಾಡದೆ 24 ಭಾಷೆಗಳಿಗೆ ರಾಷ್ಟ್ರೀಯ ಮಾನ್ಯತೆ ದೊರೆತಿರುವುದಿಲ್ಲ ಎಂಬ ಸತ್ಯ ತುಳುವರಿಗೂ ಅರ್ಥವಾಗಬೇಕು.

ತಮಿಳಿಗೆ ಶಾಸ್ತ್ರೀಯ ಭಾಷೆಯ ಪಟ್ಟ ಕೊಟ್ಟಿರುವುದು ಅವಸರದ ನಿರ್ಣಯ ಎಂಬುದಾಗಿ ಅಭಿಪ್ರಾಯಪಡುತ್ತಾರೆ. ಇದು ಸುದೀರ್ಘ ಕಾಲದ ತಮಿಳು ಭಾಷಾ ಹೋರಾಟಕ್ಕೆ ಬದಲಾದ ರಾಜಕೀಯದಲ್ಲಿ ದೊರೆತ ಒಂದು ಸದವಕಾಶ. ಯಾವುದೇ ಪ್ರಾಂತೀಯ ಭಾಷೆ ಅದೇ ಪ್ರಾಂತದವರಿಂದಲೇ ಬೆಳೆದಿಲ್ಲ. ರಾಜಕೀಯವಾಗಿ ಸದ್ದು ಮಾಡುವುದರೊಂದಿಗೆ, ರಚನಾತ್ಮಕವಾಗಿ ಭಾಷೆಯು ಸಾಂಸ್ಕೃತಿಕವಾಗಿಯೂ ಬೆಳೆಯಬೇಕಾಗುತ್ತದೆ.

ಬಂಗಾಳಿ, ಮಲೆಯಾಳಿ ಪ್ರಾದೇಶಿಕತೆಯ ಕಸುವುಳ್ಳ ತುಳುನಾಡಿನಲ್ಲಿ ದಾಸ್ಯ ಮನೋಭಾವನೆಯ ಗುಂಗಿನಿಂದ ಇನ್ನೂ ಎಚ್ಚೆತ್ತಂತೆ ಕಾಣುವುದಿಲ್ಲ. ಉತ್ತರದ ಪ್ರಭುಗಳ ಅಜ್ಞೆಗೆ 'ಜೀ ಹುಜೂರು' ಎಂಬುದಾಗಿ 'ಡೊಗ್ಗು ಸಲಾಂ' ಹಾಕುವುದೇ ಘನತೆಯೆಂದು ತಿಳಿದ ಹಿಂದಾಳುಗಳೇ ನಮ್ಮ ಮುಂದಾಳುಗಳಾಗಿದ್ದಾರೆಂದು ಕಾಣುತ್ತದೆ. ಹಾಗಲ್ಲವಾದರೆ ಅಟ್ಲಾಸಿನಲ್ಲಿ ಗುರುತಿಸಲಾದ ತುಳುನಾಡನ್ನು ಕೇಳುವುದಕ್ಕೆ ನಮ್ಮ ಪ್ರತಿನಿಧಿಗಳು ಮುಂದಾಗುತ್ತಾರೆಯೇ?

ಕೃಪೆ : ವಿಜಯ ಕರ್ನಾಟಕ 06-09-2004

೭. ತುಳು ಲಿಪಿ

ರಾಧಾಕೃಷ್ಣ ಬೆಳ್ಳೂರು

ತುಳು ಭಾಷೆಗೆ ಲಿಪಿಯಿಲ್ಲ ಎಂಬುದು ಈಗ ಹಳೆಯ ವಾದ. ಹಾಗೆ ನೋಡಿದರೆ ಒಂದು ಭಾಷೆಗೆ ಸ್ವತಂತ್ರವಾದ ಲಿಪಿ ಅನಿವಾರ್ಯವೇನೂ ಅಲ್ಲ. ಲಿಪಿಗೂ ಭಾಷೆಗೂ ಅವಿನಾಭಾವವಾದ ಸಂಬಂಧವಿಲ್ಲ. ಇಂಗ್ಲಿಷ್ ಭಾಷೆಯನ್ನು ರೋಮನ್ ಲಿಪಿಯಲ್ಲಿ, ಹಿಂದಿಯನ್ನು ದೇವನಾಗರೀ ಲಿಪಿಯಲ್ಲಿ ಬರೆಯುತ್ತೇವೆ. ಈ ಭಾಷೆಗಳಿಗೆ ಸ್ವತಂತ್ರ ಲಿಪಿ ಇಲ್ಲದ್ದರಿಂದ ತೊಂದರೆಯೇನೂ ಆಗಿಲ್ಲ. ಹಾಗೆ ತುಳು ಭಾಷೆಯನ್ನು ಕನ್ನಡ ಲಿಪಿಯಲ್ಲಿ ಬರೆಯುವುದು ತುಳುವಿಗೆ ಅವಮಾನವಲ್ಲ.

ಪ್ರಾಚೀನ ಕಾಲದಲ್ಲಿ, ಕಾಗದಗಳ ತಯಾರಿಗಿಂತ ಹಿಂದೆ ಬರವಣಿಗೆಗಾಗಿ ಭೂರ್ಜ ಪತ್ರಗಳನ್ನೂ, ತಾಳೆಗರಿಗಳನ್ನೂ ಬಳಸಲಾಗುತ್ತಿತ್ತು. ಉತ್ತರ ಭಾರತದಲ್ಲಿ ಭೂರ್ಜ ಪತ್ರಗಳು ಧಾರಾಳ ಲಭ್ಯವಿದ್ದರೆ ದಕ್ಷಿಣದಲ್ಲಿ ತಾಳೆಗರಿಗಳು ಲಭ್ಯವಿದ್ದುವು. ಉತ್ತರ ಭಾರತದಲ್ಲಿ ಚಾಲ್ತಿಯಲ್ಲಿದ್ದ ಸಂಸ್ಕೃತ ಹಾಗೂ ಸಂಸ್ಕೃತ - ಪ್ರಾಕೃತ ಜನ್ಯ ಭಾರತೀಯ ಆರ್ಯ ಭಾಷಾ ಲಿಪಿಗಳಿಗೆ ಎಡದಿಂದ ಬಲಕ್ಕೆ ಎಳೆಯಲಾಗುವ ನೇರವಾದ ತಲೆಗಟ್ಟಿರುವುದರಿಂದ ಭೂರ್ಜ ಪತ್ರಗಳಲ್ಲಿ ಮಾತ್ರ ಈ ಲಿಪಿಗಳನ್ನು ಬಳಸಲಾಗುತ್ತಿತ್ತು. ತಾಳೆಗರಿಗಳಲ್ಲಿ ಇಂತಹ ತಲೆಗಟ್ಟನ್ನು ಎಳೆದರೆ ತಾಳೆಗರಿ ಹರಿದುಹೋಗುತ್ತದೆ. ದಕ್ಷಿಣ ಭಾರತದಲ್ಲಿ ಭೂರ್ಜ ಪತ್ರಗಳು ಲಭ್ಯವಿಲ್ಲ. ಆದ್ದರಿಂದ ಮಂತ್ರಗಳೇ ಮುಂತಾದ ವೈದಿಕ ಸಾಹಿತ್ಯವನ್ನಾಗಲೀ, ಸಂಸ್ಕೃತ ಸಾಹಿತ್ಯವನ್ನಾಗಲೀ ದೇವನಾಗರಿ ಲಿಪಿಯಲ್ಲಿ ತಾಳೆಗರಿಯ ಮೇಲೆ ಬರೆಯುವುದು ಅಸಾಧ್ಯ. ಹಾಗಾಗಿ ವೈದಿಕ ಸಾಹಿತ್ಯವನ್ನು ಬರೆಯಲು ತಲೆಗಟ್ಟಿಲ್ಲದ ದುಂಡಗಿನ ಲಿಪಿಯೊಂದನ್ನು ಬಳಸುವ ಅನಿವಾರ್ಯತೆ ತಲೆದೋರಿತು.

ಮುಖ್ಯವಾಗಿ ದಕ್ಷಿಣ ಕರ್ನಾಟಕ, ತಮಿಳುನಾಡಿನ ಪಶ್ಚಿಮ ಭಾಗ ಹಾಗೂ ಉತ್ತರ ಕೇರಳಗಳಲ್ಲಿ ಆರ್ಯ ಎಳುತ್ತು ಎಂಬ ಲಿಪಿ ಸಂಪ್ರದಾಯವೊಂದು ಬೆಳಕಿಗೆ ಬಂತು. ಎಳುತ್ತು ಎಂದರೆ ಲಿಪಿ ಎಂದರ್ಥ. ಆರ್ಯ - ಅರ್ಥಾತ್ ಸಂಸ್ಕೃತ ಭಾಷೆಯನ್ನು ಬರೆಯುವುದಕ್ಕಾಗಿ ಬಳಕೆಯಾಗುವ ಲಿಪಿ ಸಂಪ್ರದಾಯವೇ ಆರ್ಯ ಎಳುತ್ತು.

ಮಲಯಾಳ ಭಾಷೆ ತಮಿಳಿನಿಂದ ಸಂಪೂರ್ಣ ಬೇರ್ಪಟ್ಟು ಸ್ವತಂತ್ರ ಭಾಷೆಯಾಗಿ ರೂಪುಗೊಳ್ಳುವ ಸಂಕ್ರಮಣ ಕಾಲಘಟ್ಟಕ್ಕಿಂತ ಮೊದಲೇ, ಅಂದರೆ ಸುಮಾರು ಹತ್ತನೆಯ ಶತಮಾನಕ್ಕಾಗಲೇ ಈ ಲಿಪಿ ಬಳಕೆಯಲ್ಲಿದ್ದುದು ಕಂಡುಬಂದಿದೆ. ಮುಖ್ಯವಾಗಿ ತುಳು ಮೂಲದ ಬ್ರಾಹ್ಮಣರು ವೈದಿಕ ಹಾಗೂ ಪುರಾಣಾದಿ ಸಾಹಿತ್ಯದ ಬರವಣಿಗೆಗೆ ಆರ್ಯ ಎಳುತ್ತನ್ನು ವ್ಯಾಪಕವಾಗಿ ಬಳಸುತ್ತಿದ್ದರು. ಭಾಷೆ - ಸಾಹಿತ್ಯದಷ್ಟೇ ಪಾವಿತ್ರ್ಯ ಲಿಪಿಗೂ ಇದೆಯೆಂದು ಭಾವಿಸಲಾಗಿದ್ದರಿಂದ ಆರ್ಯ ಎಳುತ್ತನ್ನು ಸಾಮಾನ್ಯವಾಗಿ ಇತರ ಬರವಣಿಗೆಗೆ ಬಳಸುತ್ತಿರಲಿಲ್ಲ. ಈಗ ಶ್ರೀ ವೆಂಕಟರಾಜ ಪುಣಿಂಚತ್ತಾಯರ ಪ್ರಯತ್ನ ಫಲವಾಗಿ ಉಪಲಬ್ಧವಾಗಿರುವ ಪ್ರಾಚೀನ ತುಳು ಕಾವ್ಯಗಳು ಇದೇ ಲಿಪಿಯಲ್ಲಿವೆ.

ಮಲಯಾಳಂ ತುಳುವಿಗಿಂತ ಎಷ್ಟೋ ಆಧುನಿಕ ಭಾಷೆ. ಮೊದಲು ತಮಿಳಿನ ಒಂದು

ಉಪಭಾಷೆಯಾಗಿದ್ದು, ನಿಧಾನವಾಗಿ ಸ್ವತಂತ್ರವಾದ ಮಲಯಾಳಕ್ಕೆ ಕೇರಳದಾದ್ಯಂತ ಒಂದೇ ಲಿಪಿ ಬಳಕೆಗೆ ಬಂದದ್ದು 17ನೇ ಶತಮಾನದಲ್ಲಿ. ಈ ಶತಮಾನದಲ್ಲಿ ಜೀವಿಸಿದ್ದ ತುಂಜತ್ತ್ ಎಳುತ್ತಚ್ಚನ್ ಮಲಯಾಳಂ ಲಿಪಿಯನ್ನು ತನ್ನ ಸಾಹಿತ್ಯ ಕೃತಿಗಳ ಬರವಣಿಗೆಗಾಗಿ ಪರಿಷ್ಕರಿಸಿದನೆಂದು ಹೇಳಲಾಗಿದೆ. ಪ್ರಸಿದ್ಧ ಲಿಪಿಶಾಸ್ತ್ರಜ್ಞ ಎ.ಸಿ. ಬರ್ನೆಲ್ 1874ರಲ್ಲಿ ಪ್ರಕಟವಾದ ತನ್ನ South Indian Paliography ಎಂಬ ಗ್ರಂಥದಲ್ಲಿ ಮಲಯಾಳ ಲಿಪಿಯನ್ನು ತುಳು ಲಿಪಿ ಎಂದು ಕರೆದಿದ್ದಾನೆ ಮತ್ತು - 'up to about 600 AD the Tulu and Malayalam alphabets are identical, and hardly differ from the modern Tulu Lands, from malabar proper are generally written in a very irregular sprawling lands, (The malayalam gospel - 1806 - Bombay - exactly represent it - Foot Note) those from the Tulu Country are nearer. This character was termed in malabar Arya Eluttu, and was only applied to write Sanskrit works up to the later part of the 17th century when commenced to supplant the old vatterluttu hither to used to write malayalam. In the Tulu Country it cannot be said ever to have been used for writing the Vernacular language - a Dravidian dialect destitute of a literature ಎನ್ನುತ್ತಾನೆ. ಈತನ ಅಭಿಪ್ರಾಯದಂತೆ 17ನೇ ಶತಮಾನದ ತನಕ ತುಳು - ಮಲಯಾಳಂ ಲಿಪಿಗಳು ಒಂದೇ ಆಗಿದ್ದುವು ಮತ್ತು ಎಳುತ್ತಚ್ಚನ್ ತುಳು ಮಲಯಾಳಂ ಲಿಪಿಯಿಂದ ಮಲಯಾಳಂ ಲಿಪಿಯನ್ನು ಪರಿಷ್ಕರಿಸಿದ.

ಬರ್ನೆಲ್‌ನ ಪ್ರಕಾರ ಎಳುತ್ತಚ್ಚನ್ ವಟ್ಟೆಳುತ್ತಿನ .... ಮತ್ತು ....ಗಳನ್ನು (ಇವು ದ್ರಾವಿಡ ಭಾಷೆಗಳಿಗೆ ಮಾತ್ರ ವಿಶಿಷ್ಟವಾದ ಧ್ವನಿಗಳು) ಆರ್ಯ ಎಳುತ್ತಿಗೆ ಜೋಡಿಸಿ ಮಲಯಾಳಂ ಲಿಪಿಯನ್ನು ತಯಾರಿಸಿದ್ದು ಬಿಟ್ಟರೆ ಬೇರೇನನ್ನೂ ಮಾಡಿಲ್ಲ.

ಮಲಯಾಳಂನಲ್ಲಿ ಈವರೆಗೆ ಬಂದ ಯಾವುದೇ ಲಿಪಿಶಾಸ್ತ್ರ ಗ್ರಂಥ ಮಲಯಾಳಂ ಲಿಪಿಯ ಉಗಮ ಮತ್ತು ವಿಕಾಸದ ಬಗ್ಗೆ ಎ.ಸಿ. ಬರ್ನೆಲ್‌ನ ವಿವರಣೆಗಿಂತ ಹೆಚ್ಚಿನ ವಿಚಾರಗಳನ್ನು ಹೇಳುವುದಿಲ್ಲ.

ಒಟ್ಟಿನಲ್ಲಿ ಎಳುತ್ತಚ್ಚನ್‌ನ ಕಾಲದವರೆಗೆ ತುಳು ಮತ್ತು ಮಲಯಾಳಂ ಲಿಪಿಗಳು ಒಂದೇ ಆಗಿದ್ದುವು. ಇವನ್ನು ಆರ್ಯ ಆಯಣ ಎಳುತ್ತು ಎಂದು ಕರೆಯಲಾಗುತ್ತಿತ್ತು.

ಮಲಯಾಳಂ ಬರವಣಿಗೆಗೆ ಆರ್ಯ ಎಳುತ್ತು ಮಾತ್ರ ಬಳಕೆಯಾಗುತ್ತಿದ್ದರೆ ಅದನ್ನೇ ಮಲಯಾಳಂ ಲಿಪಿ ಎಂದು ಕರೆಯುತ್ತಿದ್ದರು. ಆದರೆ ವಟ್ಟೆಳುತ್ತು ಹಾಗೂ ಕೋಲೆಳುತ್ತುಗಳೂ ಮಧ್ಯ ಹಾಗೂ ದಕ್ಷಿಣ ಕೇರಳಗಳಲ್ಲಿ ಮಲಯಾಳಂ ಬರವಣಿಗೆಗಾಗಿ ಬಳಕೆಯಾಗುತ್ತಿದ್ದವು. ಆದರೆ ಈಗಿನ ಮಲಯಾಳಂ ಲಿಪಿ ವಿಕಾಸಗೊಂಡದ್ದು ಆರ್ಯ ಎಳುತ್ತಿನಿಂದ.

ಪ್ರಾಚೀನ ತುಳು ಲಿಪಿ ಮತ್ತು ಆಧುನಿಕ ಮಲಯಾಳಂ ಲಿಪಿಗಳು ಒಂದೇ ರೀತಿ ಇವೆ. ಇದರಿಂದಾಗಿ ತುಳು ಲಿಪಿ ಎಂದರೆ ಮಲಯಾಳಂ ಲಿಪಿಯೇ ಎಂದು ಎಷ್ಟೋ ಮಂದಿ ಭಾವಿಸಿದ್ದಾರೆ. ಭಾಷಾ ಚರಿತ್ರೆಯ ದೃಷ್ಟಿಯಿಂದ ತುಳು ಮಲಯಾಳಂಗಿಂತ ಎಷ್ಟೋ ಹಿಂದಿನ ಭಾಷೆ. ದ್ರಾವಿಡ ಭಾಷೆಗಳ ಪೈಕಿ ಮಲಯಾಳಂ ಅತ್ಯಂತ ಆಧುನಿಕ. ಆದರೆ ಮಲಯಾಳಂ ಭಾಷೆ ಮತ್ತು ಸಾಹಿತ್ಯಗಳು ಬೆಳೆದಂತೆ ತುಳು ಬೆಳೆಯಲಿಲ್ಲ. ಕಾರಣ ತುಳುವಿಗೆ ವಿಶಾಲವಾದ ರಾಜತ್ವವಾಗಲಿ, ರಾಜಾಶ್ರಯವಾಗಲಿ

ಇರಲಿಲ್ಲ. ಆದರೂ ತುಳುವಿನಲ್ಲಿ ಸಾಹಿತ್ಯ ಕೃತಿಗಳ, ಮಹಾಕಾವ್ಯಗಳ ರಚನೆಯಾಗಿದೆ. ಮಲಯಾಳಂನಲ್ಲಿ ಸಾಹಿತ್ಯದ ರಚನೆ ಆರಂಭವಾಗುವುದಕ್ಕಿಂತ ಹಿಂದೆಯೇ ತುಳು ಕಾವ್ಯ ಪರಂಪರೆ ಹುಟ್ಟಿಕೊಂಡಿದೆ. ಆರ್ಯ ಎಳುತ್ತು ಸಂಸ್ಕೃತದ ಬರವಣಿಗೆಗಾಗಿ ಬಳಸಲ್ಪಟ್ಟರೂ ಅದು ಮೂಲತಃ ತುಳುವಿನ ಲಿಪಿ. ಅದನ್ನು ಪರಿಷ್ಕರಿಸಿ ಎಳುತ್ತಚ್ಚನ್ ಮಲಯಾಳಕ್ಕೆ ಅಳವಡಿಸಿದ.

ಆರ್ಯ ಎಳುತ್ತಿನಲ್ಲಿ ಬರೆಯಲಾದ ಮಂತ್ರಗಳ ಸಂಖ್ಯೆಯನ್ನು ಕನ್ನಡ ಅಂಕೆಯಲ್ಲಿ ಬರೆಯಲಾಗುತ್ತಿತ್ತೆಂದೂ, ದಕ್ಷಿಣ ಕನ್ನಡದಿಂದ ಕೇರಳಕ್ಕೆ ಬಹು ಸಂಖ್ಯೆಯಲ್ಲಿ ವಲಸೆ ಹೋದ ತುಳು ಬ್ರಾಹ್ಮಣರೇ ಆರ್ಯ ಎಳುತ್ತನ್ನು ವ್ಯಾಪಕವಾಗಿ ಬಳಕೆಗೆ ತಂದರೆನ್ನುವುದಕ್ಕೆ ಇದೇ ಆಧಾರವೆಂದೂ ವೆಂಕಟರಾಜ ಪುಣಿಂಚತ್ತಾಯರ ಅಭಿಪ್ರಾಯ.

ಕುಲಶೇಖರ ಅರಸರ ಕಾಲದಲ್ಲಿ ತುಳು ಕೇರಳದಲ್ಲಿ ಸಾಕಷ್ಟು ಪ್ರಚಾರವನ್ನು ಪಡೆಯತೊಡಗಿತ್ತು. ಅದು ತನಕ ಕೇರಳದಲ್ಲಿದ್ದ ಹಲವಾರು ಜೈನ ಕ್ಷೇತ್ರಗಳೂ ಬೌದ್ಧ ವಿಹಾರಗಳೂ ದೇವಾಲಯಗಳಾಗಿ ಮಾರ್ಪಾಟು ಹೊಂದಿದುವು. ಶಾಂತಿಗಾರರಾಗಿ - ಅಂದರೆ ಅರ್ಚಕರಾಗಿ ತುಳುನಾಡಿನಿಂದ ಬಹುಮಂದಿ ಬ್ರಾಹ್ಮಣ ಕುಟುಂಬಗಳು ಕೇರಳಕ್ಕೆ ವಲಸೆ ಹೋದುವು.

ತುಳುನಾಡಿನಿಂದ ಬಂದ ಈ ಜನರನ್ನು ತುಳು ನಂಬಿಗಳೆಂದೂ, ಪೋತ್ತಿಗಳೆಂದೂ ಅವರು ಕರೆದರು. ನಂಬಿಗಳಂತೆ ಕೇರಳಕ್ಕೆ ವಲಸೆ ಬಂದ ಇತರ ಬ್ರಾಹ್ಮಣ ಕುಟುಂಬಗಳು ನಂಬೂದಿರಿಗಳು. ನಂಬಿಗಳಲ್ಲಿ ಕೆಲವರು ದೇವಾಲಯಗಳ ಆಶ್ರಯ ಪಡೆದು ಎಂಬ್ರಾಂದ್ರಿಗಳೆನಿಸಿದರೆ, ಕೆಲವರು ರಾಜಾಶ್ರಯ ಪಡೆದು ಪೋತ್ತಿಗಳಾದರು.

ತುಳು ಲಿಪಿಯಲ್ಲಿ ಬರೆಯಲಾದ ಧಾರಾಳ ವೈದಿಕ ಗ್ರಂಥಗಳು ಕಾಸರಗೋಡು - ದಕ್ಷಿಣ ಕನ್ನಡಗಳಲ್ಲಿ ಲಭ್ಯವಿದೆ. ಧರ್ಮಸ್ಥಳದ ಮಂಜುನಾಥೇಶ್ವರ ಸಂಸ್ಕೃತಿ ಪ್ರತಿಷ್ಠಾನ ಇಂತಹ ಸಾವಿರಾರು ಗ್ರಂಥಗಳನ್ನು ಸಂಗ್ರಹಿಸಿ ಸಂರಕ್ಷಿಸಿದ್ದಲ್ಲದೆ ಇವುಗಳ ಹಸ್ತಪ್ರತಿ ಸೂಚಿಯನ್ನೂ ಪ್ರಕಟಿಸಿದೆ. ಕುಂಬಳೆಗೆ ಸಮೀಪದ ಅನಂತಪುರದಲ್ಲಿ ತುಳು ಶಾಸನವು ಪತ್ತೆಯಾಗಿದೆ. ಇವೆಲ್ಲ ದಾಖಲೆಗಳೂ ಆರ್ಯ ಎಳುತ್ತು ತುಳು ಮೂಲದ ಬ್ರಾಹ್ಮಣರಿಂದ ಪರಿಷ್ಕಾರಗೊಂಡ ತುಳು ಲಿಪಿ ಎನ್ನುವುದನ್ನು ಸಾರಿ ಹೇಳುತ್ತವೆ. ಇತ್ತೀಚಿನವರೆಗೂ ಬಹುಶಃ ಈಗಲೂ ತುಳು ಲಿಪಿ ಬಲ್ಲ ವೈದಿಕರು ಕಾಸರಗೋಡು - ದಕ್ಷಿಣ ಕನ್ನಡದಲ್ಲಿ ಜೀವಿಸಿರುವುದು ಕಂಡುಬಂದಿದೆ.

ಹೀಗಾಗಿ, ಮಲಯಾಳಂ ಲಿಪಿಯನ್ನು ತುಳು ಭಾಷೆಗೆ ಅಳವಡಿಸಲಾಗಿತ್ತೆನ್ನುವ ವಾದ ಒಪ್ಪತಕ್ಕದ್ದಲ್ಲ. ಈಗಿನ ಮಲಯಾಳಂ ಲಿಪಿ ತುಳು ಲಿಪಿಯ ಪರಿಷ್ಕೃತ ರೂಪವೆನ್ನುವುದೇ ಸರಿ. ಕಾಲಾಂತರದಲ್ಲಿ ಕನ್ನಡದ ಪ್ರಭಾವದಿಂದಾಗಿ ಮತ್ತು ಸಾಹಿತ್ಯ ರಚನೆ ಕುಂಠಿತವಾಗಿ ತುಳು ಲಿಪಿ ಮರೆಯಾಗತೊಡಗಿತು. ತುಳುವಿಗೆ ಬರವಣಿಗೆ ಅಗತ್ಯವಿಲ್ಲವೆನ್ನುವ ಭಾವನೆ ಬೆಳೆಯಿತು.

ತುಳುವಿಗೆ ಲಿಖಿತ ಸಾಹಿತ್ಯವಿಲ್ಲ ಎನ್ನುವ ವಾದ ತುಳು ಮಹಾಕಾವ್ಯಗಳು ಉಪಲಬ್ಧವಾಗುತ್ತಿದ್ದಂತೆ ಹೇಗೆ ಬಿದ್ದು ಹೋಯಿತೋ ಹಾಗೆಯೇ ಈಗ ತುಳು ಲಿಪಿಯಿಲ್ಲದ ಭಾಷೆ ಎಂಬ ಭಾವನೆಯೂ ಮರೆಯಾಗಿದೆ. ಮಲಯಾಳಂ ಲಿಪಿಯ ಬಗ್ಗೆ ಸಂಶಯಗಳು ಏಳತೊಡಗಿವೆ.

ಕೃಪೆ : ಹೊಸದಿಗಂತ 22-07-2004

೮. 'ಆಫ್ರಿಕಾ ಮಾದರಿಯಲ್ಲಿ ತುಳು ಸಾಹಿತ್ಯ ರಕ್ಷಣೆ ಅಗತ್ಯ'

ಜಿ.ಎನ್. ಮೋಹನ್

ತುಳು ಎಂದರೆ ಮೃದು, ಸಾಧು ಸ್ವಭಾವ ಎಂದು ಭಾಷಾ ಪಂಡಿತರು ವ್ಯಾಖ್ಯಾನಿಸಿದ್ದಾರೆ. ಏಳು ಮಲ್ಲಿಗೆ ತೂಕದ ರಾಜಕುಮಾರಿಯಂತಹ ತುಳು ಭಾಷೆಯ ಸೊಗಡನ್ನು ಎಲ್ಲೆಡೆ ಹರಡಲು ಕರ್ನಾಟಕ ಸರ್ಕಾರ ಆಯ್ಕೆ ಮಾಡಿದ್ದು ಅದೇ 'ತುಳು' ಗುಣದ ಪ್ರೊ. ಬಿ.ಎ. ವಿವೇಕ ರೈ ಅವರನ್ನು. ಮೃದು ಸ್ವಭಾವದ ವಿವೇಕ ರೈ ನೂತನವಾಗಿ ರಚಿತವಾದ ತುಳು ಸಾಹಿತ್ಯ ಅಕಾಡೆಮಿಯ ಪ್ರಥಮ ಅಧ್ಯಕ್ಷರು.

ತುಳು ಭಾಷೆಯ ಬನಿಯನ್ನು ತುಳು ನಾಡಿನ ಕಡಲ ತೀರದಿಂದ ಫಿನ್ಲೆಂಡಿನವರೆಗೆ ಪರಿಚಯಿಸಿದ ಹೆಮ್ಮೆ ಪ್ರೊ. ವಿವೇಕ ರೈ ಅವರದ್ದು. 'ತುಳು ಜಾನಪದ ಸಾಹಿತ್ಯ' ಕುರಿತ ಸಂಶೋಧನೆಗಾಗಿ ಡಾಕ್ಟರೇಟ್ ಪಡೆದಿರುವ ರೈ ತುಳು ಸಾಹಿತ್ಯ, ಸಂಸ್ಕೃತಿಯತ್ತ ವಿಶಿಷ್ಟ ನೋಟ ಬೀರುವ ಹಲವು ಕೃತಿಗಳನ್ನು ಕೊಟ್ಟಿದ್ದಾರೆ. ತುಳು ಗಾದೆಗಳು, ತುಳು ಒಗಟುಗಳು, ತುಳು ಅಧ್ಯಯನ: ಕೆಲವು ವಿಚಾರ, ತೌಳವ ಸಂಸ್ಕೃತಿ, ಆನ್ವಯಿಕ ಜಾನಪದ ಕೃತಿಗಳು ತುಳು ಪರಿಮಳವನ್ನು ಬಿಚ್ಚಿಡುತ್ತವೆ.

ಮಂಗಳೂರು ವಿಶ್ವವಿದ್ಯಾಲಯ ಆರಂಭಿಸಿದ ತುಳು ಪೀಠದ ಮೊದಲ ಅಧ್ಯಕ್ಷಪಟ್ಟ ಹುಡುಕಿಕೊಂಡು ಬಂದದ್ದೂ ಪ್ರೊ. ಬಿ.ಎ. ವಿವೇಕ ರೈ ಅವರನ್ನೇ. ತುಳುವಿನ ಬಗ್ಗೆ ಸಮಗ್ರ ಜ್ಞಾನ ಮಾತ್ರವೇ ಅಲ್ಲದೇ ಅದರ ಕಂಪನ್ನು ಎಲ್ಲೆಡೆ ಹರಡುವಂತಹ ಸಮರ್ಥ ನಾಯಕತ್ವದ ಗುಣ ಇರುವುದರಿಂದ ವಿವೇಕ ರೈ ಅವರನ್ನು ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಪದವಿ ಹುಡುಕಿಕೊಂಡು ಬಂದಾಗ ಯಾರಿಗೂ ಅಚ್ಚರಿಯೆನಿಸಲಿಲ್ಲ. ಈ ಎಲ್ಲದರೊಂದಿಗೆ ಈ ಹಿಂದೆ ಕರ್ನಾಟಕ ಸಾಹಿತ್ಯ ಅಕಾಡೆಮಿಯಲ್ಲಿ, ಪ್ರಸ್ತುತ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಲ್ಲಿ, ಕೇಂದ್ರ ಸಾಹಿತ್ಯ ಅಕಾಡೆಮಿಯಲ್ಲಿ ಸದಸ್ಯರಾಗಿ ತಮ್ಮ ಚಿಂತನೆಗಳನ್ನು ಹಂಚಿಕೊಂಡಿರುವ ರೈ ನೂತನ ಅಕಾಡೆಮಿಯನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯಬಲ್ಲ 'ಕ್ಯಾಪ್ಟನ್' ಎಂದೇ ಎಲ್ಲರ ಅಭಿಪ್ರಾಯ.

'ಪ್ರಜಾವಾಣಿ' ಅವರನ್ನು ಭೇಟಿ ಮಾಡಿದಾಗ ತುಳು ಭಾಷೆ, ಸಾಹಿತ್ಯ, ನೂತನ ಅಕಾಡೆಮಿಯ ಗುರಿಗಳ ಬಗ್ಗೆ ವಿವೇಕ ರೈ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಸಂದರ್ಶನದ ಆಯ್ದ ಭಾಗ ಇಲ್ಲಿದೆ.

● ತುಳು ಅಕಾಡೆಮಿಯ ರಚನೆಯ ಅವಶ್ಯಕತೆ ಇತ್ತೆ?

ತುಳುವನ್ನು ಒಂದು ಭಾಷೆಯಾಗಿ ಮತ್ತು ಆ ಭಾಷೆಯಲ್ಲಿ ಪ್ರಕಟವಾಗುವ ಸಾಹಿತ್ಯವಾಗಿ ನೋಡಿದರೆ ಒಂದು ವ್ಯವಸ್ಥಿತವಾದ ಅಕಾಡೆಮಿಕ್ ಆದ ಬೆಳವಣಿಗೆಯ ಕೆಲಸ ತುಳುವಿನಲ್ಲಿ ನಡೆಯಲಿಲ್ಲ. ನಡೆದಿದ್ದರೂ ಬಿಡಿ ಬಿಡಿಯಾಗಿ ವ್ಯಕ್ತಿಗಳ ಮಟ್ಟದಲ್ಲಿ ನಡೆಯಿತು. ಅದಕ್ಕೆ ತಾತ್ವಿಕವಾದ ಒಂದು ನಿರ್ದಿಷ್ಟ ರೂಪ ಇರಲಿಲ್ಲ. ಆ ದೃಷ್ಟಿಯಿಂದ ತುಳುವಿನಂತಹ ಮೌಖಿಕ ಪರಂಪರೆಯಲ್ಲಿ ಶ್ರೀಮಂತವಾದ ಭಾಷೆಗೆ ಲಿಖಿತ ಸಾಹಿತ್ಯದ ರೂಪು ರೇಷೆ ನೀಡುವ ದೃಷ್ಟಿಯಿಂದ ಅಕಾಡೆಮಿಯ ಅವಶ್ಯಕತೆ ಇದೆ.

• ಈಗಿರುವ ಅಕಾಡೆಮಿಗಳು ಕಾರ್ಯ ವಿಧಾನವನ್ನು ಬೆಳಕಿಗೆ ಬಾರದ ಭಾಷೆಗಳಿಗೆ ಒತ್ತುಕೊಟ್ಟು ಪುನರ್‌ರಚಿಸಿದ್ದರೆ?

ಕರ್ನಾಟಕ ಸಾಹಿತ್ಯ ಅಕಾಡೆಮಿಯನ್ನು ಕನ್ನಡ ಸಾಹಿತ್ಯ ಅಕಾಡೆಮಿಯಾಗಿಯೇ ಈ ಹಿಂದಿನವರು ರೂಪಿಸಿಕೊಂಡು ಬಂದರು. ತುಳು ಕೃತಿಗೆ ಮೂರು ವರ್ಷದಿಂದ ಅಕಾಡೆಮಿ ಬಹುಮನ ಕೊಡುತ್ತಿದೆ. ಬಹುಮಾನ ಕೊಡುವುದು ಕೃತಿ ನಿರ್ಮಾಣ ಆದ ಮೇಲೆ. ಕೃತಿ ನಿರ್ಮಾಣದ ವಾತಾವರಣ ಉಂಟಾಗಲು ಈ ನೂತನ ಅಕಾಡೆಮಿಗಳು ಬೇಕು.

ನಾವು ಸಾಂಸ್ಕೃತಿಕ ವಿಕೇಂದ್ರೀಕರಣ ಅಥವಾ ಪ್ರಾದೇಶಿಕ ಸಂಸ್ಕೃತಿಯ ಅನನ್ಯತೆಯ ಬಗ್ಗೆ ಮಾತನಾಡುವಾಗಲೂ ಸಹ ಮತ್ತೆ ಒಂದು ಭಾಷಾವಾರು ಪ್ರಾಂತ್ಯದ ಒಳಗೆ ಇರುವ ಈ ರೀತಿಯ ಕೆಲವು ವಿಶಿಷ್ಟ ಸಂಸ್ಕೃತಿಗಳನ್ನು ಕುರಿತು ಯೋಜನೆಗಳನ್ನು ಹಾಕಿಕೊಳ್ಳಲಿಲ್ಲ. ನಾವು ಆ ಬಗ್ಗೆ ಪ್ರೋತ್ಸಾಹಕರ ಮಾತುಗಳನ್ನು ಮಾತ್ರ ಹೇಳುತ್ತೇವೆ. ಈ ಮಾತು ಕೇವಲ ತುಳು, ಕೊಡವಕ್ಕೆ ಮಾತ್ರವಲ್ಲ ನಮ್ಮ ಈಶಾನ್ಯ ಭಾಗದ ಗುಡ್ಡಗಾಡು ಜನಾಂಗಗಳ ಭಾಷೆಗೂ ಅನ್ವಯ ಆಗುತ್ತದೆ.

• ತುಳುವಿನಲ್ಲಿ ಲಿಖಿತ ಸಂಸ್ಕೃತಿ ಬೆಳೆಯಲಿಲ್ಲ.

ಕಾರಣ ಬಹಳ ಸ್ಪಷ್ಟ, ಲಿಪಿಕ್ರಾಂತಿ ಎನ್ನುವುದು ಔದ್ಯೋಗೀಕರಣ ಮತ್ತು ನಾಗರಿಕತೆಯಿಂದ ಬಂದದ್ದು. ನಾಗರಿಕತೆ ಯಾವಾಗಲೂ ಆಳುವವರ ಕೈಯಲ್ಲಿತ್ತು.

ಆದಕಾರಣ ಈ ತರದ ಆಳುವ ವರ್ಗದವರ ಭಾಷೆ ಮತ್ತು ಸಂಸ್ಕೃತಿಯೇ ಈ ಪ್ರದೇಶವನ್ನು ಹತೋಟಿಯಲ್ಲಿ ಇಟ್ಟುಕೊಂಡಿತ್ತು. ಈ ಪ್ರದೇಶವನ್ನು ಆಳಿದವರು ಕನ್ನಡದ ಅರಸುಗಳಾದ ಕಾರಣ ತುಳು ಆಡಳಿತ ಭಾಷೆ ಎಂದಿಗೂ ಆಗಿರಲಿಲ್ಲ. ವ್ಯಾವಹಾರಿಕ ಭಾಷೆ ಮಾತ್ರವಾಗಿತ್ತು.

ಮೌಖಿಕ ಮತ್ತು ಲಿಖಿತ ಪರಂಪರೆಗಳ ಸಂಬಂಧಗಳು ಸಂಕೀರ್ಣವಾಗಿದ್ದರೂ ಆಯಾ ಸಂಸ್ಕೃತಿಗಳಿಗೆ ಅವುಗಳದ್ದೇ ಆದ ಕೆಲವು ವಿಶಿಷ್ಟ ಲಕ್ಷಣಗಳಿರುತ್ತವೆ. ಮುಕ್ತವಾಗಿ ತನ್ನ ಭಾವನೆಯನ್ನು ಪ್ರಕಟಿಸುವ ಮೌಖಿಕ ಸಂಸ್ಕೃತಿಯು ಲಿಖಿತ ಸಂಸ್ಕೃತಿಯ ಸಾನಿಧ್ಯದಲ್ಲಿ ಸಂಕೋಚವನ್ನು ಕೆಲವೊಮ್ಮೆ ದೈನ್ಯದ ಗುಣವನ್ನು ಹೊಂದುತ್ತವೆ. ಲಿಖಿತ ಸಂಸ್ಕೃತಿಗೆ ತನ್ನ ಪ್ರಮಾಣ ಬದ್ಧತೆಯ ಕಾರಣವಾಗಿ ಯಜಮಾನ್ಯದ ಗುಣ ಸಹಜವಾಗಿ ಬಂದಿರುತ್ತದೆ. ಅದು ಮೌಖಿಕ ಸಂಸ್ಕೃತಿಯ ಉಪಸ್ಥಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಒಡೆತನದ ಶಕ್ತಿಯನ್ನು ಪ್ರದರ್ಶಿಸುತ್ತದೆ.

• ಸಂವಿಧಾನದ ಎಂಟನೇ ಪರಿಚ್ಛೇದವನ್ನೇ ರದ್ದುಮಾಡಬೇಕು ಎಂಬುದರ ಬಗ್ಗೆ ನಿಮ್ಮ ಅಭಿಪ್ರಾಯ?

ತುಳು ಭಾಷೆಯನ್ನು ಎಂಟನೇ ಪರಿಚ್ಛೇದಕ್ಕೆ ಸೇರಿಸುವುದು ಅಥವಾ ಬಿಡುವುದು ರಾಜಕೀಯ ನಿರ್ಣಯ. ಬೇಕಾಗಲಿ ಬೇಡವಾಗಲಿ ರಾಜಕೀಯ ನಿರ್ಣಯಗಳೇ ಅನೇಕ ಬಾರಿ ಸಾಂಸ್ಕೃತಿಕ ಬೆಳವಣಿಗೆಗೆ ಕಾರಣವಾಗುತ್ತವೆ. ಮಣಿಪುರಿಯನ್ನು ಸೇರಿಸಿದ್ದರ ಹಿಂದೆ ಬಹಳಷ್ಟು ರಾಜಕೀಯ ಹೋರಾಟ ನಡೆದಿತ್ತು. ಈಗ ಸಂವಿದಾನದ ಎಂಟನೇ ಪರಿಚ್ಛೇದವನ್ನೇ ರದ್ದು ಮಾಡಿ ಎಲ್ಲಾ ಭಾಷೆಗಳು ಸಮಾನ ಎಂದು ತೀರ್ಮಾನಿಸಿದರೆ ಅದು ಒಳ್ಳೆಯ ಕೆಲಸ. ಆದರೆ ಆ ರೀತಿ ಮಾಡಿದರೆ ಅದು ಆಗದ ಹಾಗೆ ನಮ್ಮ ದೇಶದಲ್ಲಿ ರಾಜಕೀಯ ಶಕ್ತಿಗಳು ಕೆಲಸ ಮಾಡುತ್ತಿವೆ.

• ಕೇಂದ್ರ ಸಾಹಿತ್ಯ ಅಕಾಡೆಮಿ ತುಳುವಿಗೆ ಏಕೆ ಇನ್ನೂ ಮನ್ನಣೆ ಕೊಟ್ಟಿಲ್ಲ?

ಅಲ್ಪಸಂಖ್ಯಾತ ಭಾಷೆಗಳಿಗೆ ಗೌರವ ಕೊಡುವ, ಅಕಾಡೆಮಿಯ ವ್ಯಾಪ್ತಿಯೊಳಗೆ ತರುವ ಪ್ರಸ್ತಾಪ ಇತ್ತೀಚೆಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಸಭೆಯಲ್ಲಿ ಬಂದಿದೆ. ಪುಸ್ತಕ ಬಹುಮಾನ

ನೀಡುವ ಯೋಜನೆಗಿಂತ ಈ ಭಾಷೆಗೆ ಸಂಬಂಧಪಟ್ಟಂತೆ ಇತರ ರೀತಿಯ (ಪ್ರಕಟಣೆ) ಕೆಲಸಗಳನ್ನು ಮಾಡುವ ಯೋಜನೆ ಇದೆ. ಬಹುಮಾನಕ್ಕೆ ಅರ್ಹವಾದ ಕೃತಿಗಳು ತುಳು ಭಾಷೆಯಲ್ಲಿವೆ ಎಂಬುದನ್ನು ಅಕಾಡೆಮಿಯು ತಜ್ಞರಿಗೆ ಮನವರಿಕೆ ಮಾಡಿಕೊಡಬೇಕು. ತುಳುವಿನಲ್ಲಿ ಲಿಖಿತ ಸಾಹಿತ್ಯದ ನಿರ್ಮಾಣ ಇನ್ನೂ ಹೆಚ್ಚು ಸಮರ್ಪಕವಾಗಿ ನಡೆಯಬೇಕು. ತುಳು ಭಾಷಿಕರು ಒಂದು ಕೃತಿ ಮಹತ್ವ ಎಂದುಕೊಂಡಿರಬಹುದು. ಬೇರೆ ಭಾಷೆಯವರೂ ಅದನ್ನು ಮಹತ್ವದ್ದು ಎಂದು ಸ್ವೀಕರಿಸಬೇಕು. ತುಳು ಅಂತಹ ಪರೀಕ್ಷೆಗೆ ಸಿದ್ಧವಾಗಬೇಕಾಗಿದೆ. ಆ ದೃಷ್ಟಿಯಿಂದ ತುಳುವಿನಲ್ಲಿ ಕೆಲವು ಒಳ್ಳೆಯ ಕೃತಿಗಳು ಬಂದಿದ್ದರೂ ಸಹ ಈಗ ಬಂದಿರುವ ಕೃತಿಗಳ ಪ್ರಮಾಣ ಮತ್ತು ಮಟ್ಟ ನೋಡಿದರೆ ಇನ್ನೂ ಬೆಳವಣಿಗೆಯಾಗಲು ಬಹಳ ಇದೆ.

- ತುಳು ಭಾಷೆಗೆ ಇತರ ಭಾಷೆಗಳಿಗಿರುವ ಸ್ಥಾನಮಾನವನ್ನು ಹೇಗೆ ದೊರಕಿಸಿಕೊಡುತ್ತೀರಿ? ತುಳು ಸಾಹಿತ್ಯ ಅಕಾಡೆಮಿಯ ಯೋಜನೆಗಳೇನು?

ತುಳು ಅಕಾಡೆಮಿ ಈ ವರ್ಷದಿಂದಲೇ ಮೌಖಿಕ ಕೃತಿಗಳು ಹೊರಬರಲು ಸಂಬಂಧಪಟ್ಟ ಕೆಲಸ ಮಾಡಬೇಕಾಗುತ್ತದೆ. ತುಳುವಿನಲ್ಲಿ ಬರೆಯುವ ಲೇಖಕರು ಬೇರೆ ಭಾಷೆಗಳ ಸಾಹಿತ್ಯ ಓದಬೇಕು. ಮುಖ್ಯವಾಗಿ ಕನ್ನಡದ ಸಾಹಿತ್ಯ ಓದುಬೇಕು. ಕನ್ನಡದಲ್ಲಿ ಇತರ ಭಾಷೆಗಳಲ್ಲಿ ಶ್ರೇಷ್ಠ ಕೃತಿಗಳು ಹೇಗಿರುತ್ತವೆ ಎಂಬುದನ್ನು ಹಮ್ಮಿಕೊಳ್ಳಲಾಗುವುದು.

ತುಳು ಮೌಖಿಕ ಸಾಹಿತ್ಯದ ವಿಶಿಷ್ಟತೆಗಳನ್ನು ಲಿಖಿತ ರೂಪದಲ್ಲಿ ಕಾಪಾಡಿಕೊಳ್ಳುವ ರೂಪದಲ್ಲಿ ಕಮ್ಮಟ ನಡೆಸಬೇಕು. ಆಫ್ರಿಕಾದಲ್ಲಿ ಈ ರೀತಿಯ ಕೆಲಸವಾಗಿದೆ. ಮೌಖಿಕದಿಂದ ಲಿಖಿತ ರೂಪಕ್ಕೆ ಬರುವಾಗ ಯುರೋಪಿನ ಸಾಹಿತ್ಯದ ಮಾದರಿಗಳನ್ನು ಇಟ್ಟುಕೊಳ್ಳದೆ ಆಫ್ರಿಕಾದ ಕಂಠಸ್ಥ ರೂಪಗಳನ್ನೇ ಲಿಖಿತ ರೂಪಕ್ಕೆ ತಂದರು. ಚಿನುವಾ ಅಚಿಬೆ, ದೇವನೂರು ಮಹಾದೇವರ ಕುಸುಮ ಬಾಲೆಯಂತಹ ಕೃತಿಗಳು ತುಳುವಿನಲ್ಲಿ ಬರಬೇಕು. ಆಚಿಬೆ, ಭೂತಾರಾಧನೆಯಂತಹ ಆಚರಣೆಗಳನ್ನು ಇಟ್ಟುಕೊಂಡು ಅದರಿಂದ ಪ್ರೇರಿತನಾಗಿ ಕಾದಂಬರಿ ಬರೆದ. ತುಳು ಸಾಹಿತಿಗಳು ಆಚಿಬೆ, ಸೋಯಂಕಾರ ಸಾಹಿತ್ಯಕ್ಕೂ ತೆರೆದುಕೊಳ್ಳಬೇಕು.

ಬಿ.ವಿ. ಕಾರಂತರು ಇತ್ತೀಚೆಗೆ ತುಳು ನಾಟಕದ ಬಗ್ಗೆ ಮಾತನಾಡುತ್ತಾ ನಾಟಕ ಚೆನ್ನಾಗಿರಲಿಲ್ಲ, ಆದರೆ ಅದರ ವೇಗ ತುಂಬಾ ಹಿಡಿಸಿತು ಎಂದರು. ತುಳು ನಾಟಕದ ಈ ವೇಗದ ಗುಣಕ್ಕೆ ತುಳು ಜನಪದ ಕಥೆಗಳನ್ನು, ಪಾಡ್ದನಗಳನ್ನು ಸೇರಿಸಬಹುದು. ಇಲ್ಲಿನ ರಂಗ ಚಟುವಟಿಕೆಗಳು ಆಧುನಿಕ ಬೆಳವಣಿಗೆಗಳಿಂದ ಸಂಪೂರ್ಣವಾಗಿ ಪ್ರತ್ಯೇಕಗೊಂಡಿವೆ. ತುಳು ನಾಟಕ ರಚನಾ ಕಮ್ಮಟಗಳ ಮೂಲಕ ಆಧುನಿಕ ರಂಗಭೂಮಿಯ ಬಗ್ಗೆ ಇರುವ ಅಪನಂಬಿಕೆಗಳನ್ನು ಮುರಿಯಬಹುದು.

ತುಳು ಜಾನಪದವನ್ನು ಕರ್ನಾಟಕ ಹಾಗೂ ಭಾರತದ ಬೇರೆ ಭಾಗಗಳಿಗೂ ಪರಿಚಯ ಮಾಡಿಕೊಡುವುದು ಅಕಾಡೆಮಿಯ ಕೆಲಸ. ಇಂಗ್ಲಿಷ್‌ನಲ್ಲಿ ಸಣ್ಣ ಪ್ರಕಟಣೆಗಳನ್ನು ತರಬೇಕು. ತುಳು ಮತ್ತು ಕನ್ನಡದಲ್ಲಿ ಮಕ್ಕಳ ಪುಸ್ತಕಗಳ ಮಾಲೆ ಪ್ರಕಟಿಸಬೇಕು. ಪಂಜೆ ಮಂಗೇಶರಾಯರು ಬಾಲ ಸಾಹಿತ್ಯ ಮಂಡಲದಿಂದ ತುಂಬಾ ಪುಸ್ತಕ ಪ್ರಕಟಿಸಿದರು. ಈಗ ಶೂನ್ಯವಾಗಿದೆ.

ತುಳು ಕಲಿಯಲು ಭಾಷಾ ವೈಜ್ಞಾನಿಕವಾದ ಕೈಪಿಡಿ ತರಬೇಕು. ಭಾಷಾ ವೈಜ್ಞಾನಿಕಗಳ ಸಲಹೆಯಂತೆ ಭಾಷೆ ಕಲಿಸುವ ಧ್ವನಿ ಸುರುಳಿಯನ್ನು ಹೊರತರಬೇಕಾಗಿದೆ.

ಕೃಪೆ : ಪ್ರಜಾವಾಣಿ 26-6-1994

೯. ಶಿಕ್ಷಣದಲ್ಲಿ ತುಳು

ಅಜಕ್ಕಳ ಗಿರೀಶ ಭಟ್

ಭಾಷೆ ಅನ್ನುವುದು ಕೇವಲ ಸಂವಹನಕ್ಕಾಗಿ ಇರುವ ಒಂದು ಮಾಧ್ಯಮ ಮಾತ್ರ ಅಲ್ಲ. ಅದು ಒಂದು ಸಮಾಜ ಅಥವಾ ಗುಂಪಿನ ಅನನ್ಯತೆಯ ಮತ್ತು ಒಗ್ಗಟ್ಟಿನ ಸಂಕೇತ. ಹೀಗಾಗಿ ಯಾವುದೇ ಒಂದು ಭಾಷೆಯ ಬಗ್ಗೆ ತೀರ್ಮಾನಗಳನ್ನು ಕೈಗೊಳ್ಳುವಾಗ ಅದರ ರಾಚನಿಕ ಅಂಶಗಳಿಗಿಂತ ಹೆಚ್ಚಾಗಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳು ಮುಖ್ಯವಾಗುತ್ತವೆ. ಒಂದು ಸಮಾಜದಲ್ಲಿ ಭಾಷೆಯೊಂದರ ಸ್ಥಾನಮಾನವು ಆ ಸಮಾಜದಲ್ಲಿ ಆ ಭಾಷೆ ಹೇಗೆ ಬಳಕೆಯಾಗುತ್ತದೆ ಎಂಬುದನ್ನು ಅವಲಂಬಿಸಿರುತ್ತದೆ. ಭಾಷೆಯ ಬಳಕೆಯು ತನ್ನಿಂತಾನೇ ಆಗುವಂತಹುದು ಎಂದು ಮೇಲ್ನೋಟಕ್ಕೆ ಕಂಡರೂ ವಾಸ್ತವವಾಗಿ ಅದು ಹಾಗಿರುವುದಿಲ್ಲ. ಭಾಷೆಯ ಬಳಕೆಯ ಹಿಂದೆ ಪ್ರಜ್ಞಾಪೂರ್ವಕ ಪ್ರಯತ್ನಗಳಿರುತ್ತವೆ. ಇಂದಿನ ನಗರ ಜೀವನದಲ್ಲಿ ಇಂಗ್ಲಿಷ್‌ನ ಪ್ರವೇಶವನ್ನೇ ಇದಕ್ಕೆ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಇದು ಅದರಷ್ಟಕ್ಕೇ ಆದ ಒಂದು ಪ್ರಕ್ರಿಯೆಯಲ್ಲ. ಪ್ರತಿಷ್ಠೆಯ ಹುಚ್ಚು, ಇಂಗ್ಲಿಷ್ ಮೀಡಿಯಂ ವಿದ್ಯಾಭ್ಯಾಸ ಇತ್ಯಾದಿ ಪ್ರಜ್ಞಾಪೂರ್ವಕವಾಗಿ ಕೈಗೊಂಡ ಕ್ರಮಗಳೇ ಇಂಗ್ಲಿಷ್ ಬಳಕೆ ದೈನಂದಿನ ಬದುಕಿನಲ್ಲಿ ಹೆಚ್ಚುತ್ತಿರುವುದಕ್ಕೆ ಹಿನ್ನೆಲೆಗಳಾಗಿವೆ. ಹೀಗೆ, ಆಧುನಿಕ ಜಗತ್ತಿನಲ್ಲಿ ಭಾಷೆಯ ಬಳಕೆಯು ಸಾಮಾಜಿಕ, ರಾಜಕೀಯ, ಧಾರ್ಮಿಕ ಹೀಗೆ ವಿವಿಧ ಕಾರಣಗಳಿಂದ ನಿಯಂತ್ರಿಸಲ್ಪಟ್ಟಿರುತ್ತದೆ.

ತುಳುನಾಡಿನ ಸರ್ವಮಾನ್ಯ ಭಾಷೆ

ಈ ಅಂಶವನ್ನು ಹಿನ್ನೆಲೆಯಾಗಿಟ್ಟುಕೊಂಡು, ತುಳುನಾಡಿನಲ್ಲಿ ತುಳುವಿನ ಸ್ಥಿತಿಗತಿಯ ಬಗ್ಗೆ ವಿವೇಚಿಸಬಹುದು. ಕುಂದಾಪುರ ತಾಲೂಕನ್ನು ಬಿಟ್ಟರೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಹುಟ್ಟಿ ಬೆಳೆದ ಎಲ್ಲರಿಗೂ ಹೆಚ್ಚು ಕಡಿಮೆ ತುಳುಭಾಷೆ ತಿಳಿದಿದೆ. ಬಹುಪಾಲು ಜನರು ತುಳು ಮಾತೃಭಾಷೆಯವರು. ಈ ಪ್ರದೇಶದಲ್ಲಿ ತುಳುವನ್ನು ಮಾತೃಭಾಷೆಯಾಗಿ ಹೊಂದಿರುವವರಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ, ಮುಂದುವರಿದ ಅಥವಾ ಹಿಂದುಳಿದ ಎಂದೆಲ್ಲ ಗುರುತಿಸಲ್ಪಟ್ಟಿರುವ ಎಲ್ಲ ಜಾತಿಯವರಿದ್ದಾರೆ. ಅಂದರೆ, ತುಳು ಯಾವುದೋ ಒಂದು ಜಾತಿಯ ಅಥವಾ ವರ್ಗದ ಜನರ ಭಾಷೆಯಲ್ಲ. ತುಳುನಾಡಿನ ಮಟ್ಟಿಗೆ ಅದು ಸರ್ವಮಾನ್ಯವಾದ ಒಂದು ಭಾಷೆ. ತುಳುನಾಡಿನಲ್ಲಿ ಹೆಚ್ಚಾಗಿ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ವ್ಯವಹಾರಗಳು ನಡೆಯುವುದು ತುಳುವಿನಲ್ಲೇ. ಯಕ್ಷಗಾನ, ನಾಟಕಗಳಂತಹ ಮನೋರಂಜನೆಯ ಪ್ರದರ್ಶನಗಳೂ ಇಂದು ಜನಪ್ರಿಯವಾಗಿರುವುದು ತುಳು ಭಾಷೆಯಲ್ಲಿ. ಆ ದೃಷ್ಟಿಯಲ್ಲಿ ತುಳುಭಾಷೆಗೆ ತುಳುನಾಡಿನಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಸಾಕಷ್ಟು ಸ್ಥಾನಮಾನವಿದೆ. ಆದರೆ ತುಳುವಿಗೆ ಪ್ರವೇಶವೇ ಸಿಗದಿರುವ ಒಂದು ಕ್ಷೇತ್ರ ಎಂದರೆ ಶಿಕ್ಷಣ ಕ್ಷೇತ್ರ.

ಭಾರತ ಒಂದು ಬಹುಭಾಷೆಗಳುಳ್ಳ ದೇಶ. ಈ ದೇಶದಲ್ಲಿ ಲೆಕ್ಕ ಮಾಡಲು ಕಷ್ಟ ಎನಿಸುವಷ್ಟು

ಭಾಷಾಪ್ರಭೇದಗಳಿವೆ. ಇನ್ನೂರಕ್ಕಿಂತಲೂ ಹೆಚ್ಚು ಭಾಷೆಗಳಿವೆ. ಮೈಸೂರಿನಲ್ಲಿ ಇರುವ ಭಾರತೀಯ ಭಾಷೆಗಳ ಅಧ್ಯಯನ ಸಂಸ್ಥೆ ಪ್ರಕಟಿಸಿರುವ ಒಂದು ಪುಸ್ತಕದ ಪ್ರಕಾರ ಭಾರತದಲ್ಲಿ ಐವತ್ತೆಂಟು ಭಾಷೆಗಳು ಶಾಲಾ ಪಠ್ಯಕ್ರಮದಲ್ಲಿ ಸೇರಿವೆ. ನಲುವತ್ತೇಳು ಭಾಷೆಗಳು ಶಿಕ್ಷಣ ಮಾಧ್ಯಮವಾಗಿ ಬಳಕೆಯಾಗುತ್ತಿವೆ. ಹೀಗಿರುವಾಗ ತುಳುಭಾಷೆಗೆ ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರವೇಶ ಪಡೆಯುವ ಅರ್ಹತೆ ಇಲ್ಲವೇ?

ಶಿಕ್ಷಣ ಮಾಧ್ಯಮದ ಬಗೆಗಿನ ಚರ್ಚೆಗೆ ಹೋಗದೆ, ಭಾಷೆಯೊಂದು ಶಿಕ್ಷಣದಲ್ಲಿ ಯಾವ ರೀತಿ ಬಳಕೆಯಾಗುತ್ತದೆ? ಭಾಷೆಯೊಂದನ್ನು ಪಠ್ಯಕ್ರಮದಲ್ಲಿ ಅಳವಡಿಸುವ ಉದ್ದೇಶ ಏನು ಎಂಬ ಪ್ರಶ್ನೆಗಳನ್ನು ಸದ್ಯಕ್ಕೆ ಕೈಗೆತ್ತಿಕೊಳ್ಳುವುದು ಒಳ್ಳೆಯದು. ನಮ್ಮ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣದಲ್ಲಿ ಇಂಗ್ಲಿಷ್, ಹಿಂದಿ ಭಾಷೆಗಳನ್ನು ಭಾಷೆ ಕಲಿಸುವುದಕ್ಕಾಗಿಯೇ ಅಳವಡಿಸಿದಂತೆ ತೋರುತ್ತದೆ. ಆದರೆ, ಕೇವಲ ಭಾಷೆಯೊಂದನ್ನು ಕಲಿಸುವುದಕ್ಕಾಗಿ ಮಾತ್ರ ಅದನ್ನು ಪಠ್ಯಕ್ರಮದಲ್ಲಿ ಸೇರಿಸುವುದಲ್ಲ. ಹಾಗಿರುತ್ತಿದ್ದರೆ, ಕರ್ನಾಟಕದ ಬಹುತೇಕ ವಿದ್ಯಾರ್ಥಿಗಳಿಗೆ ಕನ್ನಡ ಪಠ್ಯವಿಷಯ ಬೇಕಾಗಿರಲಿಲ್ಲ. ಒಂದು ಭಾಷೆ ಪಠ್ಯಕ್ರಮದಲ್ಲಿ ಒಂದು 'ವಿಷಯ'ವಾಗಿ ಸೇರಿಸಲ್ಪಟ್ಟಾಗ, ಅದು, ವಿದ್ಯಾರ್ಥಿಗಳಲ್ಲಿ ಆ ಭಾಷೆಯನ್ನಾಡುವ ಮತ್ತು ಬಳಸುವ ಜನರ ಸಂಸ್ಕೃತಿ, ಸಾಹಿತ್ಯಗಳ ಬಗ್ಗೆ ಸ್ವಲ್ಪವಾದರೂ ಆಸಕ್ತಿ ಹುಟ್ಟಿಸಬೇಕು. ಪಠ್ಯಕ್ರಮದಲ್ಲಿರುವ ಭಾಷೆ ವಿದ್ಯಾರ್ಥಿಗೆ ತಿಳಿದಿರುವ ಭಾಷೆಯೇ ಆದರೂ ಅದರ ಮೂಲಕ ಹೆಚ್ಚು ಪರಿಣಾಮಕಾರಿಯಾಗಿ ಅಭಿವ್ಯಕ್ತಿ ಮಾಡಲು ಮತ್ತು ಆ ಭಾಷೆಯ ಸಾಹಿತ್ಯಿಕ ಮೌಲ್ಯವನ್ನು ತಿಳಿದುಕೊಳ್ಳಲು ತರಬೇತಿಯನ್ನು ನೀಡುವಂತಿರಬೇಕು.

ಸಂಕುಚಿತ ಧೋರಣೆಯಲ್ಲ

ತುಳುನಾಡಿನಲ್ಲಿ ತುಳುಭಾಷೆಯನ್ನು ಪ್ರಾಥಮಿಕ ಹಂತದಲ್ಲೇ ಪಠ್ಯಕ್ರಮದಲ್ಲಿ ಸೇರಿಸುವ ಅವಕಾಶ ನೀಡುವುದು ಸಹಜವಾಗಿ ಆಗಬೇಕಾದ ಒಂದು ಕೆಲಸ. ಕೊಡಗು ಜಿಲ್ಲೆಯಲ್ಲಿ ತಮಿಳು ಕುಟುಂಬಗಳು ಸಾಕಷ್ಟು ಸಂಖ್ಯೆಯಲ್ಲಿ ಇರುವ ಕಡೆ ತಮಿಳು ಕಲಿಸುವ ಶಾಲೆಗಳಿವೆ. ಅಲ್ಲಿಯ ತಮಿಳು ಅಧ್ಯಾಪಕರಿಗೂ ಕರ್ನಾಟಕ ಸರಕಾರವೇ ಸಂಬಳ ನೀಡಬೇಕು, ನೀಡುತ್ತಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉರ್ದು ಶಾಲೆಗಳಿವೆ. ಇದೇ ಮಾದರಿಯಲ್ಲಿ ತುಳು ಶಾಲೆಗಳನ್ನು ಆರಂಭಿಸಬಹುದು. ಅಥವಾ ಈಗಿರುವ ಪ್ರಾಥಮಿಕ ಶಾಲೆಗಳ ಪೈಕಿ ಕೆಲವು ಶಾಲೆಗಳಲ್ಲಿ ಈಗಿರುವ ಯಾವುದಾದರೊಂದು ಭಾಷೆಯ ಬದಲು ತುಳುವನ್ನು ಪಠ್ಯಕ್ರಮದಲ್ಲಿ ಸೇರಿಸಬಹುದು. ಇದು ಅಪ್ರಾಯೋಗಿಕ ಎಂದು ಆಕ್ಷೇಪಿಸುವವರಿರಬಹುದು. ಆದರೆ, ತುಳು ಸಂಸ್ಕೃತಿಯ ವೈವಿಧ್ಯವನ್ನು ತುಳುವರು ತಿಳಿಯುವಂತಾಗಲು ಇದು ಬಹಳ ಅಗತ್ಯ. ಯಾಕೆಂದರೆ, ತುಳುಭಾಷೆಯನ್ನು ಮಾತೃಭಾಷೆಯಾಗಿ ಹೊಂದಿರುವವರಲ್ಲಿ ಅನೇಕ ಸಾಂಸ್ಕೃತಿಕ ಭಿನ್ನತೆ ಮತ್ತು ಅನನ್ಯತೆಗಳಿವೆ. ತುಳುಭಾಷೆಯಲ್ಲೂ ಪ್ರಾದೇಶಿಕ ಮತ್ತು ಸಾಮಾಜಿಕ ವ್ಯತ್ಯಾಸಗಳಿವೆ. ಆದ್ದರಿಂದ ತುಳು ಸಂಸ್ಕೃತಿಯ ಏಕತೆಯೊಳಗಿನ ಅನೇಕತೆಯನ್ನು ಮತ್ತು ಅನೇಕತೆಯಲ್ಲಿರುವ ಏಕತೆಯನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳುವಂತಾಗಲು ಅದನ್ನು ಪಠ್ಯಕ್ರಮದಲ್ಲಿ ಸೇರಿಸುವಂತಾಗಬೇಕು. ಹೀಗಾಗಿ ತುಳುಭಾಷೆಯನ್ನು ಪಠ್ಯಕ್ರಮದಲ್ಲಿ ಸೇರಿಸಬೇಕೆಂಬ ಬೇಡಿಕೆಯು ಸಂಕುಚಿತ ಧೋರಣೆ ಅನ್ನಲಾಗದು. ಅದು ಅರಿವಿನ ವ್ಯಾಪ್ತಿಯನ್ನು ವಿಸ್ತರಿಸುವ ಪ್ರಯತ್ನವೇ ಆಗುತ್ತದೆ.

ತುಳುಭಾಸೆಗೆ ಲಿಪಿ ಇಲ್ಲ ಎಂಬುದು ಒಂದು ಕೊರತೆಯಾಗಿ ಮೇಲ್ನೋಟಕ್ಕೆ ಅನಿಸಬಹುದು.

ಆದರೆ ಅದು ಕೊರತೆಯೇ ಅಲ್ಲ. ಮೊದಲೇ ಉಲ್ಲೇಖಿಸಿದ ಹಾಗೆ ಭಾರತದಲ್ಲಿ ಐವತ್ತೆಂಟು ಭಾಷೆಗಳು ಪಠ್ಯಕ್ರಮದಲ್ಲಿ ಸೇರಿವೆ. ಭಾರತದಲ್ಲಿ ಅದರ ಅರ್ಧದಷ್ಟಾದರೂ ಲಿಪಿಗಳಿವೆಯೇ? ಭಾಷೆಯೊಂದು ತನ್ನದೇ ಆದ 'ಬೇರೆ ಭಾಷೆಯದಲ್ಲದ' ಲಿಪಿಯನ್ನು ಹೊಂದಿರಬೇಕು ಎಂಬುದು ಒಂದು ಅಪಸಿದ್ಧಾಂತ. ಅದನ್ನು ಈಗ ಯಾರೂ ಒಪ್ಪುವುದಿಲ್ಲ. ಕನ್ನಡ ಲಿಪಿಯನ್ನು ಬಳಸಿಕೊಂಡು ಇಂದು ತುಳು ಲಿಖಿತ ಸಾಹಿತ್ಯ ಧಾರಾಳವಾಗಿ ಬೆಳೆದಿದೆ, ಬೆಳೆಯುತ್ತದೆ.

ತುಳುಭಾಷೆಯನ್ನು ಪಠ್ಯಕ್ರಮದಲ್ಲಿ ಸೇರಿಸಬೇಕು ಎಂಬ ವಾದಕ್ಕೆ ತುಳುಭಾಷೆಯಲ್ಲಿರುವ ಸಾಹಿತ್ಯಿಕ ರಚನೆಗಳು ಪುಷ್ಟಿ ನೀಡುತ್ತವೆ. ಅವಿಭಜಿತ ದಕ್ಷಿಣ ಕನ್ನಡದ ಅನೇಕ ಪ್ರಸಿದ್ಧ ಜನಪದ ವಿದ್ವಾಂಸರಿಂದಾಗಿ ತುಳುಭಾಷೆಯಲ್ಲಿರುವ ಜನಪದ ಸಾಹಿತ್ಯದ ಶ್ರೀಮಂತಿಕೆ ಎಲ್ಲರಿಗೂ ಗೊತ್ತಿದ್ದದ್ದೇ. ಲಿಖಿತ ಸಾಹಿತ್ಯವನ್ನು ಪರಿಗಣಿಸುವುದಾದರೂ ತುಳುವಿನಲ್ಲಿ ಕವನ ಸಂಕಲನಗಳು, ಕಾದಂಬರಿಗಳು, ಕಥೆಗಳು ಬಂದಿವೆ. ಯಕ್ಷಗಾನ ಪ್ರಸಂಗಗಳಿವೆ. ನಾಟಕಗಳಿವೆ. ಅಭಿಜಾತ ಕೃತಿಗಳೇ ಬೇಕು ಎನ್ನುವವರಿಗೆ ತುಳು ಭಾಗವತೊ, ಮಂದಾರ ರಾಮಾಯಣ, ತುಳು ಜೈಮಿನಿ ಭಾರತದಂತಹ ಕೃತಿಗಳಿವೆ. ಸಾಹಿತ್ಯ ಇನ್ನಷ್ಟು ಬೆಳೆದ ಬಳಿಕ ಶಿಕ್ಷಣ ಕ್ಷೇತ್ರದಲ್ಲಿ ತುಳುವನ್ನು ಬಳಸಬಹುದು ಎಂದು ಕಾಯುವ ಅಗತ್ಯವಿಲ್ಲ. ಯಾಕೆಂದರೆ ಈ ವಿಷಯದಲ್ಲಿ ಕಾರ್ಯವೇ ಕಾರಣವಾಗುತ್ತದೆ. ಕಾರಣವೇ ಕಾರ್ಯವಾಗುತ್ತದೆ. ಅಂದರೆ, ಪಠ್ಯಕ್ರಮದಲ್ಲಿ ಅಳವಡಿಸುವುದರಿಂದ ಭಾಷೆ - ಸಾಹಿತ್ಯ ಬೆಳೆಯುತ್ತದೆ. ಭಾಷೆ - ಸಾಹಿತ್ಯ ಬೆಳೆಯುವುದರಿಂದ ಶಿಕ್ಷಣದಲ್ಲಿ ಅಳವಡಿಸಲು ಮತ್ತಷ್ಟು ಯೋಗ್ಯವೆನಿಸಿಕೊಳ್ಳುತ್ತದೆ. ಆದ್ದರಿಂದ ಪಠ್ಯಕ್ರಮದಲ್ಲಿ ಬಳಸುವ ಮೂಲಕ ಈ ಬೆಳವಣಿಗೆ ಆರಂಭವಾಗಲಿ. ಇಂದಿನ ಭಾಷಾ ರಾಜಕೀಯದ ಸನ್ನಿವೇಶದಲ್ಲಿ ಇಂತಹ ಪ್ರಜ್ಞಾಪೂರ್ವಕ ಪ್ರಯತ್ನಗಳು ಅನಿವಾರ್ಯ.

ಕಲಿಸುವವರು ಯಾರು?

ಶಾಲಾ ಪಠ್ಯಕ್ರಮದಲ್ಲಿ ತುಳುಭಾಷೆಯನ್ನು ಸೇರಿಸಿದರೆ ಅದನ್ನು ಕಲಿಸುವವರು ಯಾರು ಎನ್ನುವ ಪ್ರಶ್ನೆ ಬರುತ್ತದೆ. ಈ ತಾಂತ್ರಿಕ ಸಮಸ್ಯೆಯನ್ನು ಶೀಘ್ರವೇ ನಿವಾರಿಸಬೇಕೆಂದರೆ, ವಿಶ್ವವಿದ್ಯಾನಿಲಯ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಇತ್ಯಾದಿ ಅಂಗೀಕೃತ ಸಂಸ್ಥೆಗಳು ಈಗಿರುವ ಶಿಕ್ಷಕರಿಗೆ ತರಬೇತಿ ನೀಡುವ ಮೂಲಕ ನಿವಾರಿಸಿಕೊಳ್ಳಬಹುದು. ಇನ್ನು, ಇದನ್ನು ಒಂದು ದೀರ್ಘಕಾಲೀನ ಯೋಜನೆಯಾಗಿ ಪರಿಗಣಿಸಿದರೆ, ಇದೊಂದು ಸಮಸ್ಯೆಯೇ ಆಗದು. ಯಾಕೆಂದರೆ, ಪಿಯುಸಿ ಮತ್ತು ಪದವಿ ತರಗತಿಗಳಲ್ಲಿ ಭಾಷೆಯಾಗಿ ತುಳುವಿಗೆ ಅವಕಾಶ ನೀಡಿದರಾಯಿತು.

ಪಿಯುಸಿ ಮತ್ತು ಪದವಿಯಲ್ಲಿ ಎರಡು ಭಾಷೆಗಳನ್ನು ಕಡ್ಡಾಯಗೊಳಿಸಲಾಗಿದೆ. ಇಂಗ್ಲಿಷ್ ಕಡ್ಡಾಯವಾಗಿ ಕಲಿಸಲ್ಪಡುತ್ತಿದೆ. ಉದಾಹರಣೆಯಾಗಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪದವಿ ತರಗತಿಗಳಲ್ಲಿ ಐಚ್ಛಿಕ ಎರಡನೇ ಭಾಷೆಯಾಗಿ ಕನ್ನಡವಲ್ಲದೆ, ಫ್ರೆಂಚ್, ಪರ್ಶಿಯನ್, ಹಿಂದಿ, ಮಲಯಾಳಂ, ಜರ್ಮನ್, ಸಂಸ್ಕೃತ, ತಮಿಳು, ತೆಲುಗು, ಅರೆಬಿಕ್, ಉರ್ದು, ಕೊಂಕಣಿ ಇವುಗಳಲ್ಲಿ ಯಾವುದನ್ನಾದರೂ ಆರಿಸಿಕೊಳ್ಳಬಹುದು. ಅಂದರೆ, ಇಲ್ಲಿ ಫ್ರೆಂಚ್, ಪರ್ಶಿಯನ್, ಅರೆಬಿಕ್ ಮೊದಲಾದ ಭಾಷೆಗಳನ್ನು ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳಿಗೆ ಆರಿಸಿಕೊಳ್ಳಲು ಅವಕಾಶವಿದೆ. ಅಂಥಲ್ಲಿ ತುಳು ಭಾಷೆಯನ್ನು ಸೇರಿಸಿದರೆ ಯಾವ ತೊಡಕೂ ಉಂಟಾಗದು. ಯಾರೂ ಅದನ್ನು ತಪ್ಪೆಂದು ವಾದಿಸಲು ಸಾಧ್ಯವಿಲ್ಲ. ಮಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿ ಎಂ.ಎ. ಮಾಡುವ

ವಿದ್ಯಾರ್ಥಿಗಳಿಗೆ ತುಳುಭಾಷೆ ಹಾಗೂ ತುಳುಜಾನಪದವನ್ನು ಅಧ್ಯಯನ ಮಾಡುವ ಅವಕಾಶವಿದೆ. ಇಂಥವರನ್ನು ಪಿ.ಯು.ಸಿ. ಮತ್ತು ಪದವಿ ತರಗತಿಗಳಿಗೆ ತುಳು ಪಠ್ಯಗಳನ್ನು ಬೋಧಿಸಲು ಬಳಸಿಕೊಳ್ಳಬಹುದು. ತುಳುವನ್ನು ಒಂದು ಭಾಷೆಯಾಗಿ ಪಿ.ಯು.ಸಿ. / ಪದವಿಯಲ್ಲಿ ಕಲಿತವರು ಶಿಕ್ಷಕ ತರಬೇತಿ ಪಡೆದರೆ ತಾನೇ ತಾನಾಗಿ ತುಳುವನ್ನು ಪ್ರಾಥಮಿಕ / ಪ್ರೌಢ ಶಾಲಾ ಮಟ್ಟದಲ್ಲಿ ಬೋಧಿಸಲು ಅರ್ಹತೆ ಗಳಿಸುತ್ತಾರೆ.

ಪ್ರಾಥಮಿಕ ಮತ್ತು ಪ್ರೌಢಶಾಲಾ ಮಟ್ಟಗಳಲ್ಲಿ ತುಳುಭಾಷೆಯನ್ನು ಪಠ್ಯಕ್ರಮದಲ್ಲಿ ಸೇರಿಸಲು ಸಮಿತಿಯೊಂದರ ನೇಮಕವಾಗಬೇಕು. ಅದರ ಶಿಫಾರಸು ಬರಬೇಕು ಅಂತೆಲ್ಲ ಸರಕಾರ ಅಂದುಕೊಳ್ಳಬಹುದು. ಆದರೆ ಎಲ್ಲಕ್ಕಿಂತ ಮೊದಲು ಮಂಗಳೂರು ವಿಶ್ವವಿದ್ಯಾನಿಲಯ ಮನಸ್ಸು ಮಾಡಿದರೆ, ತುಳು ಭಾಷೆಗಳಿಗೆ ಕಾಲೇಜುಗಳಲ್ಲಿ ಮಾನ್ಯತೆ ನೀಡುವ ನಿಟ್ಟಿನಲ್ಲಿ ಆರಂಭವನ್ನಂತೂ ಮಾಡಬಹುದು.

ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಬಹುಪಾಲು ಪ್ರದೇಶ ತುಳುನಾಡೇ ಆಗಿದೆ. ಪದವಿ ತರಗತಿಗೆ ಪಠ್ಯವಾಗಲು ಯೋಗ್ಯತೆಯಿರುವ ಜನಪದ ಮತ್ತು ಲಿಖಿತ ಸಾಹಿತ್ಯ ಇಂದು ತುಳುವಿನಲ್ಲಿದೆ. ಆದ್ದರಿಂದ ಇತರ ಅನೇಕ ಭಾಷೆಗಳಿಗೆ ಅವಕಾಶ ನೀಡಿದಂತೆ ತುಳುವಿಗೂ ಅವಕಾಶ ನೀಡಬಹುದು. ವಿದೇಶೀ ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಫ್ರೆಂಚ್, ಪರ್ಶಿಯನ್ ಮೊದಲಾದ ಭಾಷೆಗಳಿಗೆ ಅವಕಾಶ ನೀಡುವಾಗ, ಸ್ಥಳೀಯ ವಿದ್ಯಾರ್ಥಿಗಳನ್ನು ಪೂರ್ತಿಯಾಗಿ ಅವಗಣಿಸಿದರೆ ಹೇಗಾದೀತು? ಈ ಬಗ್ಗೆ ತುಳು ಸಂಘಟನೆಗಳು ವಿಶ್ವವಿದ್ಯಾನಿಲಯದ ಮನವೊಲಿಸಬೇಕು. ಮುಂದಿನ ಹಂತದಲ್ಲಿ ರಾಜ್ಯ ಸರಕಾರದೆದುರು ಬೇಡಿಕೆಯನ್ನಿಡಬಹುದು. ಮಂಗಳೂರು ವಿಶ್ವವಿದ್ಯಾನಿಲಯದ ಮಟ್ಟಿಗೆ ಹೇಳುವುದಾದರೆ ಕೊಡವ ಭಾಷೆಗೂ ಈ ಅವಕಾಶ ನೀಡಬಹುದು.

ಕೃಪೆ : ಉದಯವಾಣಿ 27-12-2000

6. Karnataka Tulu Sahitya Academy

Why Tulu Language deserves recognition from Kendra Sahithya Academy and why is should be included in schedule 8B of the constitution of India?

Tulu is recognised as an important language belonging to the Dravidian family of languages and the following points may be noted in this connection.

1. In an early as 1856, Robert Caldwell, the internationally known scholar in his monumental work A Comparative Grammar of the Dravidian Languages proved that Tulu is "one of the most highly developed languages of the Dravidian family of languages" and has an equal place among the languages like Tamil, Malayalam, Telugu, Kannada etc. (Refer page 32 and the following pages in A Comparative Grammar of Dravidian Languages, III reprint edition, University of Madras, 1976). This is supported by the scholars of Linguistics all over the world during the past hundred and forty years. It is an acknowledged fact and no scholar has raised any question disputing it. Later researches by the linguists all over the world have shown that Tulu is the earliest offshoot of the Ancient dravidian source language. Traditionally it is considered as one of the five important Dravidian languages (Pancha Dravida).

2. A number of research monographs are written and published analyzing the specific features of this language and comparing and contrasting it with other languages. Notable among them are : D.N.S. Bhat 1967 : 'Descriptive Analysis of Tulu', Poona; S.L. Bhat 1971; 'A Grammar of Tulu', Wisconsin; M. Rama 1971; 'Structural Description

of Tulu - Kulala (Kumbara) Dialect', Trivandrumli, Mallikadevi 1979; 'The Structure of Tulu Verbs', Trivandrum; K.v. Jalajakshi 1980: Tulu Language (Descriptive and Comparative).

Annamalai University; K. Padmanabha 1990 : A Comparative Study of Tulu Dialect', Mangalore University etc. etc. Rev. J. Brigel wrote 'A Grammar of the Tulu Language in 1872 and S.U. Paniyadi wrote 'Tulu Vyakarna' (Tulu Grammar) in Tulu language in 1932.

3. The first dictionary for Tulu was published in 1886 (Manner Tulu English Dictionary'). The second dictionary was published by the University of Madras in 1967. (Edited by Prof. M. Mariappa Bhat and Dr. Shankara Kedilaya) under the Tulu Lexicon Project, Rastrakavi Govind Pai Samshodhana Kendra has brought out a six-volume Tulu-Kannada-English Lexicon. (Tulu Lexicon : Vol. I to VI. Chief Editor : Dr. U.P. Upadhyaya).

4. The ancient literary works of Tulu from 15th century onwards were discovered and published by the Mangalore University and Govinda Pai Samshodhana Kendra, Udupi. Special mention may be made of 'Tulu Bhagavato', 'Kaveri', 'Devi Mahatme' and 'Tulu Mahabharato'. The last work was written in the 15th century. The other three were written in the 17th century as testified by the scholarly research.

5. During the past 2 centuries more than 500 books were published in Tulu comprising of poems, novels, stories, prose works etc. Tulu literature is now developing by the contributions of great authors like Kayyara Kinhanna Rai, Amruta Someshwara, B.A. Viveka Rai, Kedambadi Jattappa Rai, Venkataraja puninchattaya, Paltadi Ramakrishna Achar, Dr. (Smt.) Sunitha M. Shetty, Dr. Vamana Nandavara, Sri. Balakrishna Shetty Polali and a host of writers of repute.

6. Tulu was formerly written in Tulu script and the ancient works of 15th, 17th & 18th centuries were discovered in that script. After the Christian missionaries started printing Bible and related literature in Tulu, the old script was discarded and Kannada script was used for writing Tulu. Modern Tulu literature is also being developed in that script. Specimen of Tulu Script is given in the Annexure I.

7. Karnataka Sahitya Academy recognised the contribution of Tulu literature a decade back and instituted annual literary award for Tulu also. Mandara Ramayana of Late Mandara Keshava Bhat was the first epic to get the Sahitya Academy Award as the best Tulu poetry.

8. Government of Karnataka decided to aid the development of this minority language and it gave a 18 year grant for the production of Tulu dictionary in 6 big volumes at the Govinda Pai Samshodhana Kendra, Udupi. The project was hailed as one of the best by the linguists world over.

9. A separate Academy for Tulu literature was established by the Karnataka Government in 1994. This gives official recognition to Tulu as an independent literary language of the State of Karnataka.

10. The Registrar General and Census Commissioner recognised this as an independent language of India ever since the department was established and the Census Report gives statistics about Tulu speakers as a separate linguistic community. It is treated as an important nonscheduled language of India.

11. American and European Universities have recognised Tulu as an important Indian language. In the Information Bulletin of the GRE and TOFEL examinations of the American Universities the candidates have to record their mother-tongue in the computerised application form by filling up the code number of the Mother tongue. A total of

133 world languages were given the code number and Tulu is one among them. Though only seventeen Indian languages are in the list, Tulu finds a place. This means that according to Western Scholars Tulu is one among the seventeen major Indian languages. Other mother-tongues do not figure in the list and they have to simply fill up the "Other languages" code.

12. AIR, Mangalore is broadcasting a number of programmes every week in Tulu. It has encouraged Tulu writers, artists and cultural organizations.

13. Tulu drama troupes are very popular in villages and cities of Tulunadu comprising Udupi, Mangalore and Kasaragod District. They are also popular world over in general and in Gulf countries in particular.

Yakshagana field drama, internationally known folk dance is very popular in this part of the country. Tulu is used as a medium during the last half century At present eight professional Yakshagana troops perform Tulu Yakshagana not only during the season in Tulu area, but also during the off season in various places of Karnataka and outside. In Mumbai Tulu Yakshagana is popular. More than 200 Yakshagana artists take part in the performance, the annual number being more than 2000. This is witnessed by nearly 1/3 of the population.

14. Many important cities in the country including Mumbai, Delhi, Bangalore, Chinnai, Tiruvananthapuram, Hydarabad, Nasik, Miraj, Baroda and also in Gulf countries like UAE, Muscat, Bahrain have Tulu organisations. In the western countries like UK., USA, Australia too Tulu people are organising literary and cultural programmes now and then.

15. Since the inception of Bangalore Doordarshan, Tulu programmes are produced and telecast. Recently it has also started

broadcasting a serial in Tulu on every Sunday noon.

16. Tulu films are recognised for Award and a few Tulu films have won State, National & International Awards.

17. A few monthlies are published in Tulu. Karnataka Tulu Sahitya Academy also is bringing out a quarterly. During the last 3 years more than 100 writers contributed articles, poems etc. to this journals. Research articles too are written in Tulu. A host of great research scholars of national & international repute are writing on Tulu culture languages folklore etc. in important journals. A large number of scholars have submitted and published thesis on Tulu language and culture.

18. Translation from Tulu language is being encouraged and a few books have been published. 'Bhagavadgita', DVG's 'Makutimmana Kagga', Tulu 'Mityanarayana Kate', 'Sati Kamale' (novel), 'Tuluvala Baliyendre' are some such books which have been translated. The epic 'Mandara Ramayana' has been translated from Tulu into Kannada by the author and the same has been accepted by Kendra Sahitya Academy for publication.

19. Kendra Sahitya Academy honoured two eminent Tulu writers Viz., late Mandara Keshava Bhat and Sri Kedambadi Jattappa Rai with the first 'Bhasha Samman' in recognition of their achievement in Tulu literature.

20. A number of artists and folklorists of Tulunadu have been honoured by Karnataka Government and various academies.

21. The Tulu Folk Epics and ritual arts have drawn the attention of research scholars of other countries also. A number of scholars from USA, UK., Germany, Italy and Finland have worked on Tulu folklore and folk literature and brought out important publications. Any scholar who wants to study the cultural heritage of Karnataka

State cannot ignore the contribution of Tuluva region to the totality of Karnataka Culture and Indian Culture.

Tulu is thus an important languages of India. It has a literary history of six centuries. The speakers have preserved their own cultural heritage, folklore and language. The total No. of people speaking Tulu within and outside of Karnataka is estimated at about thirty lakhs.

ಮಂ. ಆನಂದ ಶೆಟ್ರ್ ಮಸ್ತ್ ಒರ್ಸೊ ಬೆಂಗಳೂರು ತುಳುಕೂಟದ ಅಧ್ಯಕ್ಷೆರಾದ್ ಇತ್ತೊಂದು ತುಳು ಪರ್ಬ, ಬೊಳ್ಳಿ ಪರ್ಬೊ ಇಂಚಿತ್ತಿ ಕಜ್ಜೊ ಕೂಟೊಲೆನ್, ಅಬ್ಬಕ್ಕ ಪ್ರತಿಮೆ ಅನಾವರಣ, ತುಳು ಚಳುವಳಿ ಇಂಚಿತ್ತಿ ಸಂಘಟನೆಲೆಡ್ ಎಡ್ಡೆ ಬೆನ್ನಿ ಬೇಲೆದ ಅನುಭವ ಪಡೆತಿನಾರ್. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿದಲಾ ಸದಸ್ಯೆ ಆದ್ ಸುರುಡ್ದು ಇಂಚೊಗುಲಾ ಸಕ್ರಿಯವಾದ್ ಕೆಲಸ ಮಲ್ತೊಂದು ಬತ್ತಿನಾರ್.

ತುಳು ಬಾಸೆನ್ ಸಂವಿಧಾನದ ಎಣ್ಮನೇ ಅನುಬಂಧೊಗು ಸೇರಾವು ಹೋರಾಟದ ಕೆಲಸೊಲೆಡ್ ದುಂಬುಡ್ದಿಂಚಲಾ ಉಮೇದ್‌ಡ್ ಪಾಲ್ ಪಡೆಯಿನಾರ್. ಇಂಚಿತ್ತಿ ಒಂಜಿ ಮಾಹಿತಿ ಗ್ರಂತೊ ಈರ್ ಸಿದ್ದ ಮಲ್ತ್ ಕೊರೊಡುಂದ್ ಆರೆಗ್ ಕೇಂಡಿಸಾತ್ ಆ ವಿಷಯೊಗು ಸಮ್ಮಂದ ಪಟ್ಟಿನ ಮಾಹಿತಿಲೆನ್ ಕೂಡುಪಾಡ್‌ದ್ ಜೋಡಿದ್ ಗೋಡಿದ್ ಪೊರ್ಲುಡು ತಯಾರ್ ಮಲ್ತ್ ಕೊರಿನಾರ್.

ಮುಲ್ಪ ತುಳು ಬಾಸೆಗ್ ಸಮ್ಮಂದ ಪಟ್ಟ್‌ದ್ ಮುಖ್ಯವಾದ್ ಎಣ್ಮನೇ ಪರಿಚ್ಛೇದೊಡು ತುಳುಬಾಸೆನ್ ಸೇರಾವು ಪ್ರಯತ್ನೊಡು ಏರೇರ್ ಮಾತಾ ಬೇತೆ ಬೇತೆ ರೂಪೊಡು ಕೆಲಸ ಮಲ್ತ್‌ದೆರ್ ಪನ್ಪುನೆನ್ ಗುರ್ತ ಮಲ್ತ್ ಕೊರ್ತೆರ್.

ಈ ಸಂಪಾದನೆಡ್ ಬೇತೆ ಬೇತೆ ಪತ್ರಿಕೆಲೆಡ್ ಈ ವಿಚಾರವಾದ್ ಬೇತೆ ಬೇತೆ ಸಂದರ್ಬೊಡು ಬರೆಯಿನ ಲೇಖನೊಲೆನ್ ಆಯಾ ಲೇಖಕೆರೆ ಅನುಮತಿ ಪಡೆದ್ ಸೇರಾಯೆರೆ ಪ್ರಯತ್ನ ಬತ್ತ್‌ದೊ.

ಈ ಬೂಕುನು ಬರೆದ್ ಕೊರ್ಯೆರೆ ಒತ್ತೊಂದು ಸಂದರ್ಬೊಗು ಸರಿಯಾದ್ ಒದಗಿಸಾದ್ ಕೊರಿನ ಲೇಖಕೆರೆಗ್‌ಲಾ, ತನ್ಕುಲೆ ಲೇಖನೊಲೆನ್ ಈ ಬೂಕುಡು ಗಳಸೊನ್ಯೆರೆ ಅನುಮತಿ ಕೊರಿನ ವಿದ್ವಾಂಸೆರೆಗ್ ಅಕಾಡೆಮಿದ ಸರ್ವ ಸದಸ್ಯೆರೆ ಪರವಾದ್ ಸೊಲ್ಮೆಲು.

ಡಾ. ವಾಮನ ನಂದಾವರ
ಅಧ್ಯಕ್ಷೆರ್
ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ